## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (450) 521 |
| ಉತ್ತರ ದಿನಾಂಕ | : | 30.01.2026 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೊಳವೆಬಾವಿ, ತೆರೆದಬಾವಿ ಮತ್ತು ಕೆರೆಗಳ ನೀರನ್ನು ಮೇಲೆತ್ತುವ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ನಿರಾಪೇಕ್ಷಣಾ ಪತ್ರವನ್ನು ಯಾರಿಂದ ಪಡೆಯಬೇಕು; ನಿರಾಪೇಕ್ಷಣಾ ಪತ್ರ ಪಡೆಯಲು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು ಯಾವುವು; (ಆದೇಶದ ಪ್ರತಿ ನೀಡುವುದು) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ವಿದ್ಯುತ್ ಸಂಪರ್ಕ ಪಡಯುವ ಉದ್ದೇಶಕ್ಕಾಗಿ ನಿರಾಪೇಕ್ಷಣಾ ಪತ್ರವನ್ನು ಗ್ರಾಮ ಪಂಚಾಯಿತಿಯಿಂದ ಪಡೆಯಬೇಕಾಗಿರುತ್ತದೆ. ನಿರಾಪೇಕ್ಷಣಾ ಪತ್ರ ಪಡೆಯಲು ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.<br>1. ಆಸ್ತಿ ತೆರಿಗೆ ಪಾವತಿ ರಶೀದಿ<br>2. ಎಸ್ಕಾಂ ಅಂದಾಜು ಪಟ್ಟಿ<br>3. ಆಧಾರ್ ಪ್ರತಿ<br>4. ಪಾನ್ ಕಾರ್ಡ್<br>5. ಆರ್ ಟಿ ಸಿ (ಪಹಣಿ ಪತ್ರಿಕೆ)<br>6. 9 ಮತ್ತು 11ಎ (ಇ ಸ್ವತ್ತು ನಮೂನೆ)<br>7. ಇತರೆ ಅನ್ವಯಿಸುವ ದಾಖಲೆಗಳು<br>ಅಧಿಸೂಚನೆಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ |
| ಆ) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಕೃಷಿಗೆ ಕೊಳವೆಬಾವಿ ಕೊರೆಯಲು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರ ಯಾವುದು; (ನಿಯಮದ ಪ್ರತಿ ಲಗತ್ತಿಸುವುದು) | ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2025ರ ಪ್ರಕರಣ 11(1ಎ) ಪ್ರಕಾರ ಈ ಕೆಳಕಂಡ ಪ್ರಕರಣಗಳಿಗೆ ವಿನಾಯಿತಿ ನೀಡಲಾಗಿರುತ್ತದೆ. ನಿಯಮಾವಳಿಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಇರುತ್ತದೆ.<br>(1ಎ) ಅನುಮತಿ ಅಥವಾ ನಿರಾಪೇಕ್ಷಣಾ ಪತ್ರ ಪಡೆಯುವದರಿಂದ ವಿನಾಯತಿ ಪಡೆಯಲಾದ ಗ್ರಾಹಕರ ಪ್ರವರ್ಗಗಳು. ಹೊಸ ಕೊಳವೆ ಬಾವಿಯನ್ನು ಕೊರೆಯಲು ಅನುಮತಿ ಪಡೆಯುವುದು ಮತ್ತು ಅಂತರ್ಜಲ ತೆಗೆಯಲು ನಿರಾಪೇಕ್ಷಣಾ ಪತ್ರ ಕೋರುವುದರಿಂದ ವಿನಾಯಿತಿಸತಕ್ಕ ಪ್ರವರ್ಗಗಳು ಈ ಮುಂದಿನಂತಿವೆ,<br>(i) ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವಯಕ್ತಿಕ ಗೃಹಪಯೋಗಿ ಗ್ರಾಹಕರು;<br>(ii) ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳು<br>(iii) ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿನ ಸಶಸ್ತ್ರ, |

| | | |
|---|---|---|
| | | ಪಡೆಯ ಕಾರ್ಯಸಂಸ್ಥೆಗಳು ಮತ್ತು ಕೇಂದ್ರೀಯ ಸಶಸ್ತ್ರ ಪೋಲೀಸ್ ದಳಗಳ ಕಾರ್ಯಸಂಸ್ಥೆಗಳು;<br>(iv) ಕೃಷಿ ಚಟುವಟಿಕೆಗಳು;<br>(v) ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಕೆಗಳು ಅಥವಾ ಗಣಿಗಾರಿಕೆ ಪ್ರಾಜೆಕ್ಟ್‌ಗಳು ಅಥವಾ ಮೂಲಸೌಕರ್ಯ ಪ್ರಾಜೆಕ್ಟ್‌ಗಳ ಎಲ್ಲಾ ನಿರ್ಧರಿಸಿದ ಘಟಕಗಳಿಗೆ ಕೇವಲ ಕುಡಿಯುವ ಅಥವಾ ಗೃಹ ಬಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿನಕ್ಕೆ 5 ಘನ ಮೀಟರ್ ವರೆಗೆ; ಮತ್ತು<br>(vi) ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳು,-<br>(ಎ) ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು; ಮತ್ತು<br>(ಬಿ) ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳು. ಮೇಲೆ ವಿವರಿಸಿದಂತೆ ಅಂತರ್ಜಲವನ್ನು ಕೃಷಿ ಬಳಕೆಗೆ ಮತ್ತು ಕುಡಿಯುವ ನೀರಿಗೆ ವಿನಾಯಿತಿ ನೀಡಲಾಗಿರುತ್ತದೆ. ತಿದ್ದುಪಡಿ ಅಧಿನಿಯಮದ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಇ) | ಮಿತಿಮೀರಿದ ಅಂತರ್ಜಲ ಬಳಕೆ ಅಥವಾ ಅಧಿಸೂಚಿತವಲ್ಲದ ಪ್ರದೇಶದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ 500 ಮೀಟರ್ ದೂರದಲ್ಲಿ ಕೊಳವೆಬಾವಿ ಕೊರೆಯಲು ಅನುಮತಿ ನೀಡಲು ಗ್ರಾಮ ಪಂಚಾಯತ್‌ಗೆ ಅಧಿಕಾರವಿದೆಯೇ; (ಆದೇಶದ ಪ್ರತಿ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಿರುವ "ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮದ 1999" ರಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲದ 500 ಮೀಟರ್ ಒಳಗಾಗಿ ನೀರಿನ ಉದ್ದೇಶಕ್ಕಾಗಿ ಯಾವುದೇ ಕೊಳವೆಬಾವಿ ಯನ್ನು ತೆಗೆಯಲು ಅವಕಾಶವಿರುವುದಿಲ್ಲ.<br>ಅಧಿಸೂಚನೆಯನ್ನು **ಅನುಬಂಧ-3 ರಲ್ಲಿ** ನೀಡಿದೆ. |
| ಈ) | 500 ಮೀಟರ್ ಅಂತರದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳು ಇದ್ದಲ್ಲಿ ಕುಡಿಯುವ ನೀರಿನ ಉದ್ದೇಶಕ್ಕೆ ಕೊಳವೆಬಾವಿ ಕೊರೆಯಲು ಅನುಮತಿ ನೀಡುವ ಅಧಿಕಾರ ಗ್ರಾಮ ಪಂಚಾಯತ್‌ಗೆ ಇದೆಯೇ; ಆದೇಶದ ಪ್ರತಿ ನೀಡುವುದು | 500 ಮೀಟರ್ ಅಂತರದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳು ಇದ್ದಲ್ಲಿ ಕುಡಿಯುವ ನೀರಿನ ಉದ್ದೇಶಕ್ಕೆ ಕೊಳವೆಬಾವಿ ಕೊರೆಯಲು ಅನುಮತಿ ನೀಡುವ ಅಧಿಕಾರ "ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮದ 1999" ರ ಪ್ರಕಾರ ಗ್ರಾಮ ಪಂಚಾಯತಿಗೆ ಅಧಿಕಾರವಿರುವುದಿಲ್ಲ. ಅಧಿಸೂಚನೆಯನ್ನು **ಅನುಬಂಧ-3** ರಲ್ಲಿ ನೀಡಿದೆ |

| | | |
|---|---|---|
| ಉ) | ಕೊಳವೆಬಾವಿ ಅನುಮತಿ ಪಡೆಯುವ ಅರ್ಜಿಯನ್ನು ಎಲ್ಲಿಂದ ಪಡೆಯಬೇಕು ಹಾಗೂ ಅರ್ಜಿಯ ಜೊತೆ ಲಗತ್ತಿಸಬೇಕಾದ ದಾಖಲೆಗಳು ಯಾವುವು; ಸಕಾಲ ಅಧಿನಿಯಮದಡಿ ಇದಕ್ಕೆ ಕಾಲಮಿತಿ ಏನು? | ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2025ರ ಪ್ರಕರಣ 11(1ಎ) ರಲ್ಲಿ ಪ್ರಕರಣಗಳನ್ನು ಹೊರತುಪಡಿಸಿ ಕೊಳವೆ ಬಾವಿ ಕೊರೆಯಲು ಅಯಾ ಜಿಲ್ಲೆಯ ಜಿಲ್ಲಾ ಅಂತರ್ಜಲ ಕಛೇರಿಯಲ್ಲಿ ಅರ್ಜಿಯನ್ನು ಪಡೆಯಬಹುದಾಗಿದೆ.<br><br>ಸದರಿ ಅರ್ಜಿಗೆ 1)ವಿಳಾಸ ಪುರಾವೆ ದಾಖಲೆ, 2)ಸಂಬಂಧ ಪಟ್ಟ ಗಾಮೀಣ /ನಗರ ನೀರು ಸರಬರಾಜು ಸಂಸ್ಥೆಗಳಿಂದ 500 ಮೀ ಅಂತರದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳು ಇರದಿರುವ ಕುರಿತು ಧೃಢಿಕರಣ ಪತ್ರ. 3) ಅರ್ಜಿದ ಪ್ರದೇಶದ ಮಾಲಿಕತ್ವ ದಾಖಲೆ ಮತ್ತು ಅನಮೋದಿತ ನಕ್ಷೆ(ಸೇಲ್ ಡೀಡ್/ಖಾತ) 4) ಇತ್ತೀಚಿನ ತೇರಿಗೆ ಪಾವತಿಸಿ ರಶೀದಿ 5) ಜಮೀನು ಪರಿವರ್ತಿತ ಪ್ರತಿ 6) ನಿಗದಿತ ಅರ್ಜಿ ಶುಲ್ಕ ಸದರಿ ಸೇವೆಗೆ ಅಂತರ್ಜಲ ಅಧಿನಿಯಮ-2011ರ ಪ್ರಕರಣ 11(4)ರಲ್ಲಿ 60 ದಿನಗಳ ಕಾಲಮಿತಿ ಇರುತ್ತದೆ. |

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ -1


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೨೯, ಡಿಸೆಂಬರ್, ೨೦೨೧ (ಪುಷ್ಯ, ೦೮, ಶಕವರ್ಷ, ೧೯೪೩)<br>BENGALURU, WEDNESDAY, 29, DECEMBER, 2021 ( PUSHYA , 08, SHAKAVARSHA, 1943) | ನಂ. ೯೬೮<br>No. 968 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ಕೆಪಿಆರ್‌ಸಿ–ಡಿಇವಿ/198/2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28.12.2021.

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 66, 67, 68, 69, 70, 97,199, 199 ಎ, 200 ,201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರ ಕರಡನ್ನು ಸದರಿ ಅಧಿನಿಯಮದ ಪ್ರಕರಣ 311ರಲ್ಲಿ ನಿಗದಿಪಡಿಸಿದಂತೆ, ಇದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಮೂವತ್ತು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-01 ಇವರಿಗೆ ಕಳುಹಿಸಲು ಕೋರಲಾಗಿದೆ.

## ಕರಡು ನಿಯಮಗಳು

**1.** ಹೆಸರು ಮತ್ತು ಪ್ರಾರಂಭ.- (1) ಈ ನಿಯಮಗಳನ್ನು ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್‌ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

**2.** **ಪರಿಭಾಷೆಗಳು,**-ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1)**"ಅಧಿನಿಯಮ"**ಎಂದರೆ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993 (ಕರ್ನಾಟಕ ಅಧಿನಿಯಮ ಸಂಖ್ಯೆ 14);

(2)**"ಅಧಿಭೋಗದಾರ"**ಎಂದರೆ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯನ್ನು ಅದರ ಮಾಲೀಕನಿಂದ ಚಾಲ್ತಿಯಲ್ಲಿರುವ ಕಾನೂನಿಗನುಗುಣವಾಗಿ ಬಾಡಿಗೆ ಅಥವಾ ಬಾಡಿಗೆ ರಹಿತವಾಗಿ ಬಳಸುತ್ತಿರುವ ಅಥವಾ ಅನುಭವದಲ್ಲಿರುವ ಮತ್ತು ಅದಕ್ಕೆ ತಗಲುವ ಬಾಡಿಗೆಯನ್ನು ನಿಬಂಧನೆಗೊಳಪಟ್ಟು ಪಾವತಿಸುತ್ತಿರುವ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು;

(3)**"ಕೃಷಿ ಆಧಾರಿತ ಉತ್ಪಾದನಾ ಘಟಕಗಳ ಕಟ್ಟಡ"**ಎಂದರೆ ಪೌಲ್ಟ್ರಿಫಾರಂ, ಇಟ್ಟಿಗೆ ಉತ್ಪಾದನಾಘಟಕ, ಹೆಂಚು ತಯಾರಿಕೆ ಫ್ಯಾಕ್ಟರಿ, ಸಿಮೆಂಟ್ ಇಟ್ಟಿಗೆ/ ಇತರೆ ತಯಾರಿಕೆ ಘಟಕ, ಕಬ್ಬು ಆಧಾರಿತ ಬೆಲ್ಲ ತಯಾರಿಕಾ ಘಟಕಗಳು, ಕಾಫಿ ಬೀಜ ಸಂಸ್ಕರಣೆ, ಗೋಡಂಬಿ, ಅಡಿಕೆ ಸಂಸ್ಕರಣೆ, ಮೀನು ಆಹಾರ, ಕೋಳಿ ಆಹಾರ ಮತ್ತು ಜಾನುವಾರು ಆಹಾರ, ಆಹಾರ ಉತ್ಪಾದನಾ ಘಟಕಗಳು, ಮೀನು ಸಂಸ್ಕರಣೆ ಮತ್ತು ಪ್ಯಾಕಿಂಗ್, ತರಕಾರಿ ತೈಲ ತಯಾರಿಕೆ, ಎಣ್ಣೆ ತಯಾರಿಕೆ ಗಾಣಗಳು, ತರಕಾರಿ, ಹಣ್ಣು, ಹಾಲು ಸಂಸ್ಕರಣಾ ಹಾಗೂ ಶೀತಲೀಕರಣ ಘಟಕಗಳು, ಆಯುರ್ವೇದ ಔಷಧಿ ತಯಾರಿಕಾ ಘಟಕಗಳು, ಹಿಟ್ಟಿನಗಿರಣಿಗಳು, ಇನ್ನಿತರ ಯಾವುದೇ ಕೃಷಿ ಆಧಾರಿತ ಉತ್ಪಾದನಾ ಘಟಕಗಳು, ವಾಣಿಜ್ಯ ಉದ್ದೇಶದ ಪುಷ್ಪೋದ್ಯಮ, ವಾಣಿಜ್ಯ ಉದ್ದೇಶದ ನರ್ಸರಿ ಅಥವಾ ಪ್ರಕ್ರಿಯೆಯನ್ನು ನಡೆಸಲಾಗುವ ಕಟ್ಟಡಗಳು;

(4)**"ಕೈಗಾರಿಕಾ ಕಟ್ಟಡ"** ಎಂದರೆ ಯಂತ್ರಗಳ ಮೂಲಕ ಉಗಿ, ನೀರು, ತೈಲ, ಅನಿಲ, ವಿದ್ಯುತ್ ಅಥವಾ ಯಾವುದೇ ಇತರೆ ರೀತಿಯ ಇಂಧನ ಶಕ್ತಿಯ ಸಹಾಯದಿಂದ ನಡೆಸುವ ಕೈಗಾರಿಕೆ, ಉತ್ಪಾದನಾಘಟಕ, ತಯಾರಿಕಾ ಘಟಕಗಳು, ಡಿಸ್ಟಿಲರಿ, ತೈಲ ಸಂಸ್ಕರಣಾಗಾರ, ಸಕ್ಕರೆ ಕಾರ್ಖಾನೆಗಳು, ಔಷಧಿ ತಯಾರಿಕಾ ಘಟಕ, ಕ್ರಷರ್(ಕಲ್ಲುಪುಡಿ ಘಟಕ)ಗಳು, ಸ್ಟೋನ್‌ಕಟಿಂಗ್ ಮತ್ತು ಪಾಲಿಷಿಂಗ್ ಘಟಕಗಳು, ಅಮೃತಶಿಲೆ/ಗ್ರಾನೈಟ್ ಇತರೆ ಕತ್ತರಿಸುವ, ನುಣುಪುಗೊಳಿಸುವ ಘಟಕಗಳು, ರೆಡಿಮೇಡ್ ಗಾರ್ಮೆಂಟ್ಸ್, ಬಟ್ಟೆ ತಯಾರಿಕಾ ಮತ್ತು ಬಟ್ಟೆಗೆ ಬಣ್ಣ ಹಾಕುವ ಘಟಕಗಳು, ಫ್ಲೋರ್ ಮಿಲ್, ರೈಸ್‌ಮಿಲ್‌ಗಳು, ಸಾಮಿಲ್‌ಗಳು, ಮಿನರಲ್ ವಾಟರ್ ಘಟಕಗಳು, ಹಾಗೂ ನವೀಕರಿಸಬಹುದಾದ ವಿದ್ಯುತ್ ಉತ್ಪಾದನಾ ಘಟಕಗಳಾದ ಸೋಲಾರ್, ವಿಂಡ್‌ಮಿಲ್ಸ್, ಜಲವಿದ್ಯುತ್ ಘಟಕಗಳು, ಸಿಗರೇಟ್ ಸೇರಿದಂತೆ ತಂಬಾಕು ಉತ್ಪನ್ನಗಳು, ಧಾನ್ಯಗಳ ಸಂಸ್ಕರಣಾ ಘಟಕ, ಕೀಟನಾಶಕಗಳ ತಯಾರಿಕೆ, ಕೈಮಗ್ಗ, ಯಾವುದೇ

ಔದ್ಯಮಿಕ ತಯಾರಿಕಾ ಅಥವಾ ವ್ಯಾಪಾರ ಪ್ರಕ್ರಿಯೆಯನ್ನು ನಡೆಸಲಾಗುವ ಕಟ್ಟಡಗಳು, ಕಾರ್ಖಾನೆಗಳು, ಐ.ಟಿ./ಬಿ.ಟಿ. ಉದ್ಯಮ, ಪವರ್ ಪ್ಲಾಂಟ್, ಸೋಲಾರ್ ಸ್ಥಾವರ, ವಿಂಡ್ ಮಿಲ್ಸ್, ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ., ಇತರೆ ವಿಶೇಷ ಆರ್ಥಿಕ ವಲಯದ(ಎಸ್.ಇ.ಝೆಡ್.) ಕಟ್ಟಡಗಳು;

(5) **"ಖಾಲಿ ಜಾಗ"** ಎಂದರೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ ಮತ್ತು ಇತರೆ ಉದ್ದೇಶದ ಯಾವುದೇ ಕಟ್ಟಡ ಸಾಮಗ್ರಿಗಳನ್ನು ಒಳಗೊಂಡಿರುವ ರಚನೆಯನ್ನು ಹೊಂದಿರದ ಹಾಗೂ ಪಾರ್ಕಿಂಗ್ ಅಥವಾ ಸ್ಟಾಕ್‌ಯಾರ್ಡ್ ಮತ್ತು ರನ್‌ವೇಗಾಗಿ ಬಳಸದ ಖಾಲಿ ಜಾಗವಾಗಿರುವ ಕೃಷಿಯೇತರ ಭೂಮಿ;

(6)**"ತೆರಿಗೆ"** ಎಂದರೆ ಅಧಿನಿಯಮದ ಪ್ರಕರಣ 199ನೇ (1)ನೇ ಉಪ-ಪ್ರಕರಣದ ಮೇರೆಗೆ ಗ್ರಾಮ ಪಂಚಾಯಿತಿ ಪ್ರದೇಶದ ಪರಿಮಿತಿಯಲ್ಲಿ ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಖಾಲಿ ಜಾಗ ಮತ್ತು ಕಟ್ಟಡಗಳು, ನಿರ್ಮಿತ ರಚನೆಗಳ ಮೇಲೆ ನಿಯಮಿಸಬಹುದಾದಂತೆ ವಿಧಿಸಬಹುದಾದ ಕರಗಳನ್ನು ಒಳಗೊಂಡಿರತಕ್ಕದ್ದು;

(7) **"ದರ"**ಎಂದರೆ ಈ ಅಧಿನಿಯಮದ ಪ್ರಕರಣ 199ನೇ (2)ನೇ ಉಪ-ಪ್ರಕರಣದ ಮೇರೆಗೆ ಸರಬರಾಜು ಸೇವೆಗಳಿಗೆ ನಿಯಮಿಸಬಹುದಾದಂತೆ ವಿಧಿಸಬಹುದಾದ ಸುಂಕಗಳನ್ನು ಒಳಗೊಂಡಿರತಕ್ಕದ್ದು;

(8) **"ನಮೂನೆ"**ಎಂದರೆ ನಿಯಮಗಳಿಗೆ ಲಗತ್ತಿಸಿರುವ ನಮೂನೆ;

(9)**"ನಿವೇಶನ"**ಎಂದರೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕಾ ಉದ್ದೇಶಕ್ಕಾಗಿ ವಿಭಾಗಗಳಾಗಿ ವಿಂಗಡಿಸಲಾದ, ನಿರ್ಮಿತ ಪ್ರದೇಶದ ಜಾಗ ಹಾಗೂ ಯಾವುದೇ ಕಟ್ಟಡವನ್ನು ಕಟ್ಟಿರದ ವಿವಿಧ ಆಕಾರದ ಖಾಲಿ ಜಾಗ;

(10) **"ನಿರ್ಮಿತ ಪ್ರದೇಶ"** ಎಂದರೆ ನಿವೇಶನದ ಒಳಗೆ ಕಾನೂನು ಬದ್ಧವಾಗಿ ಬಿಡಬೇಕಾದ ಪ್ರದೇಶವನ್ನು ಹೊರತುಪಡಿಸಿ ನಿರ್ಮಿಸಿದ ಕಟ್ಟಡ, ನೆಲಮಾಳಿಗೆ, ಬಾಲ್ಕನಿ, ಗ್ಯಾರೇಜ್, ಈಜುಕೊಳ, ಮೇಲಂತಸ್ತು ಸೇರಿದಂತೆ ಒಟ್ಟು ಪ್ರದೇಶ;

(11)**"ಪ್ರಕರಣ"**ಎಂದರೆ ಅಧಿನಿಯಮದ ಪ್ರಕರಣ;

(12) **"ಫೀಜು"**ಎಂದರೆ ಅಧಿನಿಯಮದ ಪ್ರಕರಣ 199ನೇ (3)ನೇ ಉಪ-ಪ್ರಕರಣದ ಮೇರೆಗೆ ಗ್ರಾಮ ಪಂಚಾಯಿತಿಯ ಶಾಸನಬದ್ಧ ಅಧಿಕಾರಗಳಿಗನುಗುಣವಾಗಿ ನಿಯಮಿಸಬಹುದಾದಂತೆ ವಿಧಿಸಬಹುದಾದ ಶುಲ್ಕಗಳನ್ನು ಒಳಗೊಂಡಿರತಕ್ಕದ್ದು;

(13) **"ಮಾಲೀಕ"**ಎಂದರೆ ಯಾವುದೇ ಆಸ್ತಿಯ ಮೇಲೆ ಸಂಪೂರ್ಣ ಮಾಲೀಕತ್ವ ಹೊಂದಿರುವ ಅಥವಾ ಇತರರ ಆಸ್ತಿಯ ಮಾಲೀಕರಿಂದ ಚಾಲ್ತಿಯಲ್ಲಿರುವ ಕಾನೂನಿನನ್ವಯ ಆಸ್ತಿಯ ಮೇಲಿನ ಒಡೆತನವನ್ನು ಪಡೆದ, ಯಾವುದೇ ಖಾಲಿ ಭೂಮಿ ಅಥವಾ ಕಟ್ಟಡದಲ್ಲಿ ತತ್ಕಾಲದಲ್ಲಿ

ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯನ್ನು ಒಳಗೊಂಡಿರತಕ್ಕದ್ದು;

(14) **"ಮೌಲ್ಯಾಧಾರಿತ ವರ್ಗೀಕರಣ"** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 199ರ ಉಪ ಪ್ರಕರಣದ (1)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಖಾಲಿ ಭೂಮಿಗಳ ಮೇಲೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಕಾಲಕಾಲಕ್ಕೆ ಪ್ರಕಟಿಸುವ ಮಾರ್ಗಸೂಚಿ ಮಾರುಕಟ್ಟೆ ದರಗಳನ್ವಯ ನಿರ್ಧರಿಸುವ ಮೌಲ್ಯದ ಆಧಾರದ ಮೇಲೆ ಮಾಡುವ ಪ್ರದೇಶವಾರು ವರ್ಗೀಕರಣ;

(15)**"ವರ್ಷ"**ಎಂದರೆ ಏಪ್ರಿಲ್ ತಿಂಗಳ ಮೊದಲನೇ ದಿವಸದಂದು ಪ್ರಾರಂಭವಾಗಿ ಮುಂದಿನ ವರ್ಷದ ಮಾರ್ಚ್ 31ನೇ ದಿವಸದಂದು ಮುಕ್ತಾಯವಾಗುವ ಆರ್ಥಿಕ ವರ್ಷ;

(16)**"ವಸತಿ ಕಟ್ಟಡ"** ಎಂದರೆ ಸಾಮಾನ್ಯ ಪ್ರದೇಶವನ್ನು ಒಳಗೊಂಡಂತೆ ಮಾನವ ವಾಸಸ್ಥಳಕ್ಕಾಗಿ ಸಂಪೂರ್ಣವಾಗಿ ಬಳಸುವ ನಿರ್ಮಿತ ಕಟ್ಟಡ, ಅಪಾರ್ಟ್‌ಮೆಂಟ್, ಫ್ಲಾಟ್, ವಿಲ್ಲಾ, ವಿಲ್ಲಾಮೆಂಟ್, ಗೇಟೆಡ್ ಕಮ್ಯೂನಿಟಿ, ರೋಹೌಸಸ್ ಮತ್ತು ಬಹುಮಾಲೀಕತ್ವದ ಕಟ್ಟಡಗಳು.

(17) **"ವಸತಿಯೇತರ ಕಟ್ಟಡ"** ಎಂದರೆ ವಸತಿಯೇತರ ಉದ್ದೇಶಕ್ಕಾಗಿ ಬಳಸಲಾಗುವ ವೃತ್ತಿಪರ ಅಥವಾ ಇತರ ಸೇವಾ ಸೌಲಭ್ಯಗಳನ್ನು ಒದಗಿಸುವ ಸರ್ಕಾರೇತರ ಶಾಲೆಗಳು, ಕಾಲೇಜುಗಳು, ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳು, ಸಹಕಾರಿ ಸಂಘ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳ ಮತ್ತು ಕಂಪನಿಗಳ ಕಛೇರಿಗಳು, ಟ್ರೇಡ್/ ಏಜೆನ್ಸಿ/ ಎಂಟರ್‌ಪ್ರೈಸಸ್/ ಇತರೆ ಕಛೇರಿಗಳು, ದಾಸ್ತಾನು ಮಳಿಗೆಗಳು, ಗಾಲ್ಫ್‌ಕೋರ್ಸ್, ಕ್ಲಬ್ ಮತ್ತು ರಿಕ್ರಿಯೇಷನ್ ಸಂಸ್ಥೆಗಳು, ಕಟ್ಟಡ ನಕ್ಷೆ ಮತ್ತು ಅಂದಾಜು ತಯಾರಿಕಾ ಕಛೇರಿ, ಸೇವಾ ಅಪಾರ್ಟ್‌ಮೆಂಟ್ / ಫ್ಲಾಟ್, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ವಿದ್ಯುತ್ ಸರಬರಾಜು ಕಂಪನಿಗಳು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆ.ಪಿ.ಟಿ.ಸಿ.ಎಲ್), ಬಿ.ಎಸ್.ಎನ್.ಎಲ್., ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ), ಏರ್ ಪೋರ್ಟ್, ವಿಮಾನ ಹಾರಾಟ ತರಬೇತಿ ಕೇಂದ್ರ, ರಸ್ತೆ ಸಾರಿಗೆ ನಿಗಮ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇತರೆ ಮಂಡಳಿಗಳು ಮತ್ತು ನಿಗಮಗಳ ಕಟ್ಟಡಗಳು;

(18) **"ವಾಣಿಜ್ಯ ಕಟ್ಟಡ"**ಎಂದರೆ ಯಾವುದೇ ಪ್ರದೇಶ ಅಥವಾ ಅದರ ಭಾಗವನ್ನು ವ್ಯಾಪಾರದ ಮಳಿಗೆ, ಉತ್ಪನ್ನಗಳನ್ನು ಸಗಟು ಅಥವಾ ಚಿಲ್ಲರೆ ಮಾರಾಟ ಮಾಡುವ ಅಂಗಡಿ, ಮಾರುಕಟ್ಟೆ, ಪೆಟ್ರೋಲ್ ಬಂಕ್, ಗ್ಯಾಸ್ ಫಿಲ್ಲಿಂಗ್ ಸ್ಟೇಷನ್, ರೆಸ್ಟೋರೆಂಟ್, ಹೋಟೆಲ್, ಚಿತ್ರಮಂದಿರಗಳು, ಕಲ್ಯಾಣ ಮಂಟಪಗಳು, ಕ್ಯಾಂಟೀನ್, ಕಾಫಿ/ಟೀ ಶಾಪ್, ಬೇಕರಿ, ಹಾಲಿನಕೇಂದ್ರ, ಐಸ್‌ಕ್ರೀಂ ಪಾರ್ಲರ್, ಕೂಲ್‌ಡ್ರಿಂಕ್ಸ್ ಮತ್ತು ಹಣ್ಣಿನಜ್ಯೂಸ್ ಸೆಂಟರ್, ಮಿನರಲ್ ವಾಟರ್ ಪೂರೈಕೆ, ಪಾನ್‌ಬೀಡಾ ಅಂಗಡಿ, ಹಣ್ಣಿನ ಅಂಗಡಿಗಳು, ತರಕಾರಿ ಅಂಗಡಿಗಳು, ಕಾಫಿ ವರ್ಕ್ಸ್, ಮಸಾಲ ಪೌಡರ್, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಇನ್ನಿತರೆ ಪದಾರ್ಥಗಳ ಮಾರಾಟ, ಮಾಂಸ, ಕೋಳಿ ಮತ್ತು ಮೀನು ಮಾರಾಟ, ವೈನ್ ಸ್ಟೋರ್, ಬಾರ್‌ಅಂಡ್ ರೆಸ್ಟೋರೆಂಟ್, ಬ್ಯಾಂಕುಗಳು, ವಸತಿಗೃಹಗಳು (ಲಾಡ್ಜ್), ಅತಿಥಿ ವಸತಿ ಗೃಹಗಳು(ಪಿಜಿ), ಹೋಂಸ್ಟೇಗಳು,

ಡಾರ್ಮೆಂಟರಿ/ಇತರೆ, ಕ್ಲೀನಿಕ್‌ಗಳು, ನರ್ಸಿಂಗ್ ಹೋಂಗಳು, ಖಾಸಗಿ ಆಸ್ಪತ್ರೆಗಳು, ಡಯೊಗ್ನೋಸ್ಟಿಕ್ಸ್ ಸೆಂಟರ್, ಔಷದಿಗಳ ಸಗಟು ವ್ಯಾಪಾರ, ಮೆಡಿಕಲ್/ವೆಟರ್ನರಿಶಾಪ್, ಕನ್ನಡಕ ಮಾರಾಟದ ಅಂಗಡಿಗಳು, ದ್ವಿಚಕ್ರ/ ಮೂರುಚಕ್ರ /ನಾಲ್ಕುಚಕ್ರ ವಾಹನ ಮಾರಾಟ ಮಳಿಗೆಗಳು, ಟ್ರಾನ್ಸ್‌ಪೋರ್ಟ್/ ಆಟೋಕನ್ಸಲ್ಟೆಂಟ್ಸ್, ಟೂರ್ಸ್ ಅಂಡ್ ಟ್ರಾವೆಲ್ಸ್, ಡ್ರೈವಿಂಗ್ ಸ್ಕೂಲ್‌ಗಳು, ಆಟೋ ಮೊಬೈಲ್, ಗ್ಯಾರೇಜ್/ವರ್ಕ್ ಶಾಪ್‌ಗಳು, ಪಂಕ್ಚರ್ ಅಂಗಡಿ, ಸೈಕಲ್ ಶಾಪ್, ಟೈರ್ ವ್ಯಾಪಾರ, ಸರ್ವೀಸ್ ಸ್ಟೇಷನ್, ಇಂಜಿನಿಯರಿಂಗ್ ವರ್ಕ್ಸ್, ಚಿನ್ನ ಬೆಳ್ಳಿ ಮಾರಾಟದ ಅಂಗಡಿ, ಗಿರವಿ ಅಂಗಡಿ, ಲೇವಾದೇವಿ ವ್ಯವಹಾರ, ಫೈನಾನ್ಸ್, ಅಕ್ಕಿಅಂಗಡಿ, ಬಾಳೆಮಂಡಿ, ಪ್ರಾವಿಜನ್‌ಸ್ಟೋರ್ಸ್ / ಕಿರಾಣಿ ಅಂಗಡಿ, ಫ್ಯಾನ್ಸಿಸ್ಟೋರ್ಸ್, ಸ್ಟೇಷನರಿ, ಬಿಗ್ ಬಜಾರ್, ಮೋರ್/ಈಸೀಡೇ, ಇತರೆ ಮಾಲ್ ಅಥವಾ ಮಲ್ಟಿಪ್ಲೆಕ್ಸ್, ಫೋಟೋ ಸ್ಟುಡಿಯೋಗಳು ಮತ್ತು ವೀಡಿಯೋಗ್ರಫಿ, ಕೇಬಲ್, ಫೋಟೋ ಫ್ರೇಂ ವರ್ಕ್ಸ್,ಫ್ಲೆಕ್ಸ್ ಮತ್ತು ಸ್ಟಿಕ್ಕರ್ ಕಟಿಂಗ್, ಪ್ರಿಂಟಿಂಗ್ ಮತ್ತು ಪೇಪರ್ ಮಾರ್ಟ್, ಡಿ.ಟಿ.ಪಿ. ಸೆಂಟರ್, ಜೆರಾಕ್ಸ್/ಟೈಪಿಂಗ್, ಕೊರಿಯರ್ ಸರ್ವೀಸ್, ಕಂಪ್ಯೂಟರ್ ಸೇಲ್ಸ್, ಇಂಟರ್‌ನೆಟ್ ಸೆಂಟರ್, ಮೊಬೈಲ್ ಶಾಪ್‌ಗಳು, ಮೊಬೈಲ್ ರಿಪೇರಿ, ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟ/ ರಿಪೇರಿ ಅಂಗಡಿ, ವೇಬ್ರಿಡ್ಜ್, ಜಿಮ್, ಬ್ಯೂಟಿಪಾರ್ಲರ್‌ಗಳು, ಮಸಾಜ್ ಸೆಂಟರ್/ಸ್ಪಾಕೇಂದ್ರ, ಸಲೂನ್, ಗ್ಯಾಸ್‌ಏಜೆನ್ಸಿ, ಗ್ಯಾಸ್ ದಾಸ್ತಾನು ಮಳಿಗೆ, ಗ್ಯಾಸ್‌ರಿಪೇರಿ, ಪ್ಲಾಸ್ಟಿಕ್ ಅಂಗಡಿ, ಸ್ಟೀಲ್ ಪಾತ್ರೆ, ಇನ್ನಿತರೆ ಗೃಹೋಪಯೋಗಿ ವಸ್ತುಗಳ ಮಾರಾಟ, ಬಟ್ಟೆ ಅಂಗಡಿ, ಟೈಲರಿಂಗ್ ಶಾಪ್, ಗಡಿಯಾರದ ಅಂಗಡಿ, ದೋಬಿ ಅಂಗಡಿ, ಡ್ರೈಕ್ಲೀನರ್ಸ್, ಶೂ ಮತ್ತು ಚಪ್ಪಲಿ ಅಂಗಡಿ, ಲೆದರ್ ವರ್ಕ್ಸ್, ಹಾಸಿಗೆ ಅಂಗಡಿ, ಫರ್ನೀಚರ್ ಅಂಗಡಿ, ಹಾರ್ಡ್‌ವೇರ್/ಸ್ಯಾನಿಟರಿವೇರ್ ಅಂಗಡಿಗಳು, ಪ್ಲಂಬಿಂಗ್, ಪ್ಲೈವುಡ್, ಟೈಲ್ಸ್‌ವ್ಯಾಪಾರ, ಬಣ್ಣದಅಂಗಡಿ, ಸಿಮೆಂಟ್ ಅಂಗಡಿ, ಸಿಮೆಂಟ್ ದಾಸ್ತಾನು ಮಳಿಗೆ, ಕಬ್ಬಿಣದ ಅಂಗಡಿ, ಮರಗೆಲಸ, ಹಳೇ ಮರದ ವ್ಯಾಪಾರ, ಬಿದಿರು ಬೊಂಬುಗಳ ಮಾರಾಟದ ಅಂಗಡಿ, ಪಟಾಕಿ ಅಂಗಡಿಗಳು, ಗುಜರಿ ಅಂಗಡಿ, ಎಲೆ, ಲೋಟ, ಪೇಪರ್ ಮಾರಾಟ, ಕೃಷಿಯಂತ್ರೋಪಕರಣಗಳ ಮಾರಾಟ, ಕ್ರಿಮಿನಾಶಕ/ ಬಿತ್ತನೆ ಬೀಜಗಳ ಅಂಗಡಿ, ಗೊಬ್ಬರದ ಅಂಗಡಿ, ಪಶು ಆಹಾರ ವ್ಯಾಪಾರ, ತೂಕ ಮತ್ತು ಅಳತೆ ಸಾಧನಗಳು, ಶಾಮಿಯಾನ/ ಫ್ಲವರ್ ಡೆಕೋರೇಟರ್ಸ್, ಸೌಂಡ್ ಸಿಸ್ಟಮ್, ಸೀರಿಯಲ್ ಸೆಟ್, ಅಮೃತಶಿಲೆ/ಗ್ರಾನೈಟ್/ಇತರೆಟೈಲ್ಸ್ ವ್ಯಾಪಾರ, ಎಲೆಕ್ಟ್ರೋಪ್ಲೇಟಿಂಗ್/ಗ್ಯಾಸ್‌ಕಟ್ಟಿಂಗ್ ವ್ಯವಹಾರ, ಕೊಬ್ಬರಿ/ತೆಂಗಿನಕಾಯಿ ವ್ಯಾಪಾರ, ಇಸ್ತ್ರಿ ಅಂಗಡಿಗಳು;

(19)**"ಸವಕಳಿ"**ಎಂದರೆ ಕರ್ನಾಟಕ ಲೋಕೋಪಯೋಗಿ ಇಲಾಖೆಯು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಕಟ್ಟಡದ ವಾರ್ಷಿಕ ಇಳಿಕೆ ಮೌಲ್ಯ;

(20)**"ಸ್ವತ್ತಿನ ಮೂಲ ಮೌಲ್ಯ"** ಎಂದರೆ ಖಾಲಿ ಭೂಮಿ, ಕಟ್ಟಡಗಳ ಅಥವಾ ಅವೆರಡರ ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ ನಿಗಧಿ ಮಾಡಿದ, ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45-ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿಗಳನ್ವಯ ನಿರ್ಧರಣೆಯಾಗುವ ಒಟ್ಟು ಬಂಡವಾಳ ಮೌಲ್ಯ. ಈ ಮೌಲ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಸೂಚನೆಯನ್ವಯ ನಿರ್ಧರಿಸಿದ ಕಟ್ಟಡದ ಸವಕಳಿ ಮೌಲ್ಯವನ್ನು ಕಳೆಯುವುದು;

## ಅಧ್ಯಾಯ–II
## ಸಾಮಾನ್ಯ ಉಪಬಂಧಗಳು

**3. ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸುವುದಕ್ಕಾಗಿ ಪ್ರಕ್ರಿಯೆ.–** (1) ಪ್ರತಿಯೊಂದು ಗ್ರಾಮ ಪಂಚಾಯಿತಿಯು ಅಧಿನಿಯಮದ 199ನೇ ಪ್ರಕರಣದ(1)ನೇ ಉಪ–ಪ್ರಕರಣದ ಅಡಿಯಲ್ಲಿ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ವಿಧಿಸುವುದಕ್ಕೆ ಮುಂಚೆ ಹಾಗೂ ಅಧಿನಿಯಮದ 199ನೇ ಪ್ರಕರಣದ(2) ನೇ ಉಪ–ಪ್ರಕರಣದ ಅಡಿಯಲ್ಲಿ ನೀರು ಸರಬರಾಜು ದರ ವಿಧಿಸುವುದಕ್ಕೆ ಮುಂಚೆ ಮತ್ತು ಅಧಿನಿಯಮದ 199ನೇ ಪ್ರಕರಣದ(3)ನೇ ಉಪ–ಪ್ರಕರಣದ ಅಡಿಯಲ್ಲಿ ನಿಯಮಿಸಬಹುದಾದಂಥ ಯಾವುದೇ ಫೀಜುಗಳನ್ನು ವಿಧಿಸುವುದಕ್ಕೆ ಮುಂಚೆ;–

(ಅ) ಸರ್ಕಾರದ ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳಿಗನುಗುಣವಾಗಿ ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸುವ, ನಿರ್ಧರಿಸುವ, ಸಂಗ್ರಹಿಸುವ ಬಗ್ಗೆ ಗ್ರಾಮ ಸಭೆಯಲ್ಲಿ ಮಂಡಿಸಿ, ನಂತರ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸತಕ್ಕದ್ದು; ಮತ್ತು

(ಆ) ಅಂಥ ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸುವ, ನಿರ್ಧರಿಸುವ, ಸಂಗ್ರಹಿಸುವ ಬಗ್ಗೆ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳಿಗಿಂತ ಕಡಿಮೆ ಇಲ್ಲದ ದಿನಾಂಕವನ್ನು ನಿರ್ದಿಷ್ಟಪಡಿಸಿ ಗ್ರಾಮ ಪಂಚಾಯಿತಿಯ ಸೂಚನಾ ಫಲಕದಲ್ಲಿ, ಗ್ರಾಮ ಪಂಚಾಯಿತಿ ಪಂಚತಂತ್ರ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಗ್ರಾಮ ಪಂಚಾಯಿತಿ ಪ್ರದೇಶದಲ್ಲಿನ ಇತರ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು;

(2) ಗ್ರಾಮ ಪಂಚಾಯತಿಯು ಪ್ರಸ್ತಾಪಿಸಿದ ತೆರಿಗೆ, ದರ ಅಥವಾ ಫೀಜನ್ನು ವಿಧಿಸುವ ಬಗ್ಗೆ ಆಕ್ಷೇಪಿಸುವ ಯಾರೇ ವ್ಯಕ್ತಿಯು ಗ್ರಾಮ ಪಂಚಾಯತಿಯು ಆ ಪ್ರಸ್ತಾವವನ್ನು ಸಾರ್ವಜನಿಕವಾಗಿ ಪ್ರಕಟಿಸಿದ ಹದಿನೈದು ದಿನಗಳೊಳಗೆ ಬರಹದಲ್ಲಿ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಬಹುದು.

(3) ತರುವಾಯ ಗ್ರಾಮ ಪಂಚಾಯತಿಯು (1)ನೇ ಉಪ–ನಿಯಮದ ಮೇರೆಗೆ ಮಾಡಿದ ಎಲ್ಲಾ ಆಕ್ಷೇಪಣೆ ಮತ್ತು ಸಲಹೆಗಳನ್ನು ಮೂವತ್ತು ದಿನಗಳೊಳಗೆ ಪರ್ಯಾಲೋಚಿಸತಕ್ಕದ್ದು ಮತ್ತು ಆ ಪ್ರಸ್ತಾವವನ್ನು ಅನುಮೋದಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ತಿರಸ್ಕರಿಸಬಹುದು.

(4) (1)ನೇ ಉಪ–ನಿಯಮದ ಮೇರೆಗೆ ಪ್ರಸ್ತಾವವನ್ನು ಗ್ರಾಮ ಪಂಚಾಯತಿಯು ತೀರ್ಮಾನಿಸಿದ ನಂತರ ತೆರಿಗೆ ಅಥವಾ ದರ ಅಥವಾ ಫೀಜನ್ನು ಗ್ರಾಮ ಪಂಚಾಯಿತಿಯು ನಿರ್ದಿಷ್ಟಪಡಿಸಿದ ದಿನಾಂಕದ ಆರ್ಥಿಕ ವರ್ಷಕ್ಕೆ ಸಾರ್ವಜನಿಕವಾಗಿ ಗ್ರಾಮ ಪಂಚಾಯಿತಿಯ ಸೂಚನಾ ಫಲಕದಲ್ಲಿ, ಗ್ರಾಮ ಪಂಚಾಯಿತಿ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಗ್ರಾಮ ಪಂಚಾಯಿತಿ ಪ್ರದೇಶದಲ್ಲಿನ ಇತರ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಣೆ ಮಾಡುವುದರ ಮೂಲಕ ಅಂಥ ತೆರಿಗೆ ಅಥವಾ ದರ ಅಥವಾ ಫೀಜನ್ನು ವಿಧಿಸತಕ್ಕದ್ದು.

(5) ಗ್ರಾಮ ಪಂಚಾಯಿತಿಗಳು ವಿಧಿಸುವ ತೆರಿಗೆ, ದರ ಮತ್ತು ಫೀಜುಗಳ ಬಗ್ಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸತಕ್ಕದ್ದು.

(6) ಗ್ರಾಮ ಪಂಚಾಯಿತಿಯಲ್ಲಿ ತೆರಿಗೆ, ದರ ಮತ್ತು ಫೀಜುಗಳ ವಿವರಗಳನ್ನೊಳಗೊಂಡ ಸೂಚನಾ ಫಲಕವನ್ನು ಶಾಶ್ವತವಾಗಿ ಅಳವಡಿಸತಕ್ಕದ್ದು.

(7) ಗ್ರಾಮ ಪಂಚಾಯಿತಿಯು ಸರ್ಕಾರವು ರಚಿಸಿದ ನಿಯಮಗಳ ಅನುಸಾರವಾಗಿ ತೆರಿಗೆ, ದರ ಮತ್ತು ಫೀಜುಗಳನ್ನು ನಿರ್ಧರಿಸತಕ್ಕದ್ದು, ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(8) ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆಗಳನ್ನು ಪೂರ್ಣವಾಗಿ ಅಥವಾ ಗರಿಷ್ಠ ಎರಡು ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು;

**4. ಅರ್ಜಿ ನಮೂನೆ ಮತ್ತು ದಾಖಲೆಗಳು.-**

(1) **ಕಟ್ಟಡ ನಿರ್ಮಾಣ,-** ಅಧಿನಿಯಮದ ಪ್ರಕರಣ 64ರಡಿಯಲ್ಲಿ ಗ್ರಾಮ ಪಂಚಾಯಿತಿ ಪ್ರದೇಶದ ಪರಿಮಿತಿಯಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸುವ ಯಾವುದೇ ವ್ಯಕ್ತಿಯು ಅನುಮತಿ/ಲೈಸೆನ್ಸ್ ಪತ್ರಕ್ಕಾಗಿ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಆನ್‌ಲೈನ್ ಅಥವಾ ನೇರವಾಗಿ ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು ಹಾಗೂ ಸಕಾಲ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ, ಉಪವಿಧಿಗಳು 2015 ರಂತೆ ಇರತಕ್ಕದ್ದು.

(2) **ವಾಣಿಜ್ಯ, ವ್ಯಾಪಾರ, ವಸತಿಯೇತರ ವ್ಯವಹಾರ, ಕೈಗಾರಿಕೆ ಮತ್ತು ಕೃಷಿ ಆಧಾರಿತ ಉತ್ಪಾದನಾ ಘಟಕ,-** ಅಧಿನಿಯಮದ ಪ್ರಕರಣ66, 67, 68, 69 ಮತ್ತು 70ರಡಿಯಲ್ಲಿ ಗ್ರಾಮ ಪಂಚಾಯಿತಿ ಪ್ರದೇಶ ಪರಿಮಿತಿಯಲ್ಲಿ ವಾಣಿಜ್ಯ, ವ್ಯಾಪಾರ, ವಸತಿಯೇತರ ವ್ಯವಹಾರ, ಕೈಗಾರಿಕೆ ಮತ್ತು ಕೃಷಿ ಆಧಾರಿತ ಉತ್ಪಾದನಾ ಘಟಕ ಪ್ರಾರಂಭಿಸಲು ಉದ್ದೇಶಿಸುವ ಯಾವುದೇ ವ್ಯಕ್ತಿಯು ಲೈಸನ್ಸ್ ಅಥವಾ ಅನುಮತಿ ಅಥವಾ ನಿರಾಕ್ಷೇಪಣಾ ಪತ್ರಕ್ಕಾಗಿ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಆನ್‌ಲೈನ್ ಅಥವಾ ನೇರವಾಗಿ ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು ಹಾಗೂ ಸಕಾಲ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ, ಉಪವಿಧಿಗಳು 2015 ರಂತೆ ಇರತಕ್ಕದ್ದು.

(3) **ನಿರಾಕ್ಷೇಪಣಾ ಪ್ರಮಾಣ ಪತ್ರ,-** ಗ್ರಾಮ ಪಂಚಾಯಿತಿ ಪ್ರದೇಶ ಪರಿಮಿತಿಯಲ್ಲಿ ಯಾವುದೇ ವಿದ್ಯುತ್ ಸಂಪರ್ಕ ಪಡೆಯುವ ಉದ್ದೇಶಕ್ಕಾಗಿ, ಭೂ ಪರಿವರ್ತನೆಯ ಉದ್ದೇಶಕ್ಕಾಗಿ, ಕಲ್ಲು ಪುಡಿ ಮಾಡುವ(ಕ್ರಷರ್) ಪರವಾನಿಗೆ ಪಡೆಯುವ ಉದ್ದೇಶಕ್ಕಾಗಿ ಹಾಗೂ ಇತರೆ ಉದ್ದೇಶಕ್ಕಾಗಿ (ಉದ್ದೇಶವನ್ನು ನಮೂದಿಸುವುದು) ನಿರಾಕ್ಷೇಪಣಾ ಪ್ರಮಾಣಪತ್ರ ಪಡೆಯಲು ಉದ್ದೇಶಿಸುವ ಯಾವುದೇ ವ್ಯಕ್ತಿಯು ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಆನ್‌ಲೈನ್ ಅಥವಾ ನೇರವಾಗಿ ಗ್ರಾಮ ಪಂಚಾಯಿತಿಗೆ ಸಲ್ಲಿಸತಕ್ಕದ್ದು ಹಾಗೂ ಸಕಾಲ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು.

(ಅ) ಅರ್ಜಿದಾರರು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆಯಲು ಉದ್ದೇಶಿಸಿರುವ ಸ್ಥಳದ ವಿವರಗಳನ್ನು ನಮೂನೆ-1ರಲ್ಲಿ ದ್ವಿಪ್ರತಿಯಲ್ಲಿ ಸಲ್ಲಿಸುವುದು; ಮತ್ತು

(ಆ) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆದ ಅಂದಾಜು ಪತ್ರಿಕೆ, ಇ-ಸ್ವತ್ತು ನಮೂನೆ, ಆಸ್ತಿ ತೆರಿಗೆ ಪಾವತಿ ರಶೀದಿ, ಪಹಣಿ ಪತ್ರಿಕೆ ಹಾಗೂ ಇತರೆ ಅನ್ವಯಿಸುವ ದಾಖಲೆಗಳನ್ನು ಅರ್ಜಿಯೊಡನೆ ಸಲ್ಲಿಸುವುದು.

(4) **ನಲ್ಲಿ ನೀರು ಸಂಪರ್ಕ,–** ಗ್ರಾಮದಲ್ಲಿ ಕೊಳಾಯಿ ನೀರು ಸರಬರಾಜು ವ್ಯವಸ್ಥೆ ಇದ್ದಲ್ಲಿ ಸ್ವತ್ತಿನ ಮಾಲೀಕನು ಸ್ವತ್ತಿನ ವಿವರಗಳೊಂದಿಗೆ ನಲ್ಲಿ (ಕೊಳಾಯಿ) ಮೂಲಕ ಮಾಡಲಾಗುವ ನೀರು ಸರಬರಾಜು ಸಂಪರ್ಕಕ್ಕೆ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಸಕಾಲ ತಂತ್ರಾಂಶದಲ್ಲಿ ದಾಖಲಿಸತಕ್ಕದ್ದು.

(ಅ) ಅರ್ಜಿದಾರರು ನಲ್ಲಿ (ಕೊಳಾಯಿ) ಮೂಲಕ ಮಾಡಲಾಗುವ ನೀರು ಸರಬರಾಜು ಸಂಪರ್ಕಕ್ಕೆ ವಿವರಗಳನ್ನು ನಿಗಧಿತ ನಮೂನೆಯಲ್ಲಿ ನಿರ್ದಿಷ್ಟಪಡಿಸಿರುವಂತೆ ಸಲ್ಲಿಸತಕ್ಕದ್ದು.

(ಆ) ಸ್ಥಳಕ್ಕೆ ಸಂಬಂಧಿಸಿದ ಮಾಲೀಕತ್ವದ ದೃಢೀಕರಣ ಪತ್ರವನ್ನು ಅರ್ಜಿಯೊಡನೆ ಸಲ್ಲಿಸತಕ್ಕದ್ದು.

5. **ಅರ್ಜಿಗಳ ಸ್ವೀಕೃತಿ.–** ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯು ಅಥವಾ ಅವರಿಂದ ಪ್ರಾಧಿಕರಿಸಿದ ವ್ಯಕ್ತಿಯು ಅರ್ಜಿಗಳನ್ನು ಸ್ವೀಕರಿಸತಕ್ಕದ್ದು. ಅರ್ಜಿಯ ಒಂದು ಪ್ರತಿಯನ್ನು ಸ್ವೀಕರಿಸಿದ ದಿನಾಂಕವನ್ನು ನಮೂದಿಸಿ ಸಹಿಯೊಡನೆ ದೃಢೀಕರಿಸಿ ಅರ್ಜಿದಾರರಿಗೆ ನೀಡತಕ್ಕದ್ದು.

6. **ಅರ್ಜಿಗಳ ಪರಿಶೀಲನೆ.–** ನಿಯಮ–4 ರಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ನಿಯೋಜಿತನಾದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಸ್ಥಳ ಪರಿಶೀಲನೆ ಮಾಡುವುದು. ತದನಂತರ ಪರಿಶೀಲನಾ ವರದಿಯೊಡನೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅರ್ಜಿಯಲ್ಲಿ ನಿಗಧಿಪಡಿಸಿದ ವಿವರ ಸಲ್ಲಿಸದಿದ್ದಲ್ಲಿ ಐದು ದಿನದೊಳಗೆ ಒದಗಿಸಲು ಅರ್ಜಿದಾರರಿಗೆ ತಿಳಿಸುವುದು. ಅಂತಹ ಮಾಹಿತಿಯನ್ನು ಅರ್ಜಿದಾರರು ಒದಗಿಸತಕ್ಕದ್ದು.

7. **ಆಕ್ಷೇಪಣೆಗಳನ್ನು ಆಹ್ವಾನಿಸುವುದು ಇತ್ಯಾದಿ.–** (1) ಗ್ರಾಮ ಪಂಚಾಯಿತಿಯು 5ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಸಾರ್ವಜನಿಕ ನೋಟೀಸಿನಲ್ಲಿ ಹದಿನೈದು ದಿವಸಗಳನ್ನು ಮೀರದ ದಿನಾಂಕವನ್ನು ನಿರ್ದಿಷ್ಟಪಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು.

(2) ಯಾವುದೇ ಆಕ್ಷೇಪಣೆಗಳು ಬಂದಲ್ಲಿ ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣೆಯೊಡನೆ ಲೈಸೆನ್ಸ್ ಅಥವಾ ಅನುಮತಿ ಪ್ರಸ್ತಾವನೆಯನ್ನು ಗ್ರಾಮ ಪಂಚಾಯಿತಿ ಸಭೆಯಲ್ಲಿ ಮಂಡಿಸುವುದು. ಸಭೆಯಲ್ಲಿ ಆಕ್ಷೇಪಣೆಗಳನ್ನು ಪರ್ಯಾಲೋಚಿಸುವುದು ಹಾಗೂ ಇತ್ಯರ್ಥಪಡಿಸತಕ್ಕದ್ದು.

8. **ಲೈಸೆನ್ಸ್ ಅಥವಾ ಅನುಮತಿ ಅಥವಾ ನಿರಾಕ್ಷೇಪಣಾ ಪತ್ರ ನೀಡುವುದು.–** (1) ಅರ್ಜಿದಾರರು ಸಲ್ಲಿಸಿರುವ ವಿವರಗಳು ಈ ನಿಯಮಗಳು ಉಪಬಂಧಗಳ ಅನುಸಾರ ಇದೆಯೆಂದು ಗ್ರಾಮ ಪಂಚಾಯಿತಿಗೆ ಮನದಟ್ಟಾದರೆ, ಗ್ರಾಮ ಪಂಚಾಯಿತಿಯು ನಿರ್ದಿಷ್ಟಪಡಿಸಬಹುದಾದ ಫೀಜು ಅಥವಾ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಕೋರಲಾದ ಕಟ್ಟಡ ಅನುಮತಿ/ಲೈಸೆನ್ಸ್‌ನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ, ಉಪವಿಧಿಗಳು 2015 ರಂತೆ ನೀಡತಕ್ಕದ್ದು ಮತ್ತು ನಿರಾಕ್ಷೇಪಣಾ ಪತ್ರವನ್ನು ನಮೂನೆ–2ರಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಹಿಯೊಂದಿಗೆ ಅರ್ಜಿದಾರರಿಗೆ ನೀಡತಕ್ಕದ್ದು.

(2)ವಾಣಿಜ್ಯ, ವ್ಯಾಪಾರ, ವಸತಿಯೇತರ ಚಟುವಟಿಕೆಗಳಿಗೆ ನೀಡಲಾಗುವ ಲೈಸೆನ್ಸ್ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಪ್ರಾರಂಭಿಸತಕ್ಕದ್ದು.

(3)ಕೈಗಾರಿಕೆ ಮತ್ತು ಕೃಷಿ ಆಧಾರಿತ ಉತ್ಪಾದನಾ ಘಟಕದ ಉದ್ದೇಶಕ್ಕೆ ಒಮ್ಮೆ ಮಾತ್ರ ಅನುಮತಿ ನೀಡತಕ್ಕದ್ದು.

(4)ಲೈಸೆನ್ಸ್ ಅಥವಾ ಅನುಮತಿ ಪತ್ರವನ್ನು ನೀಡುವಾಗ ಗ್ರಾಮ ಪಂಚಾಯಿತಿಯು ನಿಯಮಬದ್ಧವಾಗಿ ಸೂಕ್ತವೆನಿಸುವ ಷರತ್ತುಗಳನ್ನು ವಿಧಿಸತಕ್ಕದ್ದು.

(5)ಲೈಸೆನ್ಸ್ ಅಥವಾ ಅನುಮತಿ ಪತ್ರದಲ್ಲಿ ನಮೂದಿಸಿರುವ ಷರತ್ತುಗಳನ್ನು ಉಲ್ಲಂಘಿಸಿರುವುದು ಅಥವಾ ಪರಿಸರಕ್ಕೆ ಹಾನಿಯುಂಟುಮಾಡುವ ಸಂದರ್ಭಗಳು ಕಂಡು ಬಂದರೆ, ಲೈಸೆನ್ಸ್‌ದಾರರಿಗೆ ಅವುಗಳನ್ನು ಸರಿಪಡಿಸಿಕೊಳ್ಳಲು ಏಳು ದಿನಗಳ ಕಾಲಾವಕಾಶವನ್ನು ನೀಡುವುದು. ಸಮಸ್ಯೆಗಳನ್ನು ಈ ಅವಧಿಯೊಳಗೆ ಸರಿಪಡಿಸದಿದ್ದರೆ ಗ್ರಾಮ ಪಂಚಾಯಿತಿಯು ಅಂತಹ ಲೈಸೆನ್ಸ್ ಅಥವಾ ಅನುಮತಿಯನ್ನು ಏಕಪಕ್ಷೀಯವಾಗಿ ರದ್ದುಪಡಿಸುವ ಅಧಿಕಾರ ಹೊಂದಿರತಕ್ಕದ್ದು.

9. **ಲೈಸೆನ್ಸ್ ನವೀಕರಣಕ್ಕಾಗಿ ಅರ್ಜಿ.–** ಅಧಿನಿಯಮದ 70ನೇ ಪ್ರಕರಣದ (2–ಎ) ಉಪ ಪ್ರಕರಣದ ಮೇರೆಗೆ ಈ ನಿಯಮಗಳಡಿ ನೀಡಲಾಗಿರುವ ಲೈಸೆನ್ಸ್‌ನ್ನು ನವೀಕರಣಕ್ಕಾಗಿನ ಪ್ರತಿಯೊಂದು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಅವಧಿ ಮುಕ್ತಾಯಕ್ಕೆ ಮೂವತ್ತು ದಿನಗಳೊಳಗೆ ಸಲ್ಲಿಸುವುದು. ಆದರೆ ಅಂತಹ ಅರ್ಜಿಯನ್ನು ಅರವತ್ತು ದಿನಗಳಿಗಿಂತ ಮುಂಚಿತವಾಗಿ ಸಲ್ಲಿಸತಕ್ಕದ್ದಲ್ಲ.

10. **ಲೈಸೆನ್ಸ್ ನವೀಕರಣ.–** ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನಿರ್ದಿಷ್ಟ ಕಾರಣವಿಲ್ಲದ ಹೊರತು ಅಧ್ಯಕ್ಷರ ಅನುಮೋದನೆ ಪಡೆದು ಏಳು ದಿನದೊಳಗೆ ನವೀಕರಿಸತಕ್ಕದ್ದು. ನವೀಕರಿಸಿದ ಬಗ್ಗೆ ಮುಂದಿನ ಗ್ರಾಮ ಪಂಚಾಯಿತಿ ಸಭೆಗೆ ಮಾಹಿತಿ ನೀಡುವುದು. ಕಟ್ಟಡ ಅನುಮತಿ/ಲೈಸೆನ್ಸ್ ನವೀಕರಣವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ, ಉಪವಿಧಿಗಳು 2015 ರಂತೆ ನೀಡತಕ್ಕದ್ದು.

11. **ಲೈಸೆನ್ಸ್ ಅಥವಾ ಅನುಮತಿಯನ್ನು ರದ್ದುಗೊಳಿಸುವಿಕೆ.–** ನಿಯಮ 8 ಮತ್ತು 10 ರಡಿಯಲ್ಲಿ ನೀಡಲಾದ ಲೈಸೆನ್ಸ್ ಅಥವಾ ಅನುಮತಿ ಅಥವಾ ನವೀಕರಣವನ್ನು ಯಾವುದೇ ಸಂದರ್ಭದಲ್ಲಿ

ಸಕಾರಣದೊಂದಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿ ರದ್ದುಗೊಳಿಸುವ ಅಧಿಕಾರವನ್ನು ಗ್ರಾಮ ಪಂಚಾಯಿತಿಯು ಹೊಂದಿರತಕ್ಕದ್ದು. ಅಂತಹ ಲೈಸೆನ್ಸ್ ಅಥವಾ ಅನುಮತಿ ಅಥವಾ ನವೀಕರಣವನ್ನು ರದ್ದುಪಡಿಸಿದ ನಂತರ ರದ್ದಾದ ಬಗ್ಗೆ ಸಾರ್ವಜನಿಕವಾಗಿ ಪ್ರಕಟಿಸತಕ್ಕದ್ದು ಹಾಗೂ ನೀರು ಸರಬರಾಜು ಸಂಪರ್ಕವನ್ನು ಕಡಿತಗೊಳಿಸುವುದು ಹಾಗೂ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಸಂಬಂಧಿಸಿದ ಎಸ್ಕಾಂಗಳಿಗೆ ತಿಳಿಸತಕ್ಕದ್ದು. ಸದರಿ ಲೈಸೆನ್ಸ್ ಅಥವಾ ಅನುಮತಿ ಅಥವಾ ನವೀಕರಣದ ರದ್ದುಗೊಳಿಸುವಿಕೆಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ಮಾದರಿ, ಉಪವಿಧಿಗಳು 2015 ರಂತೆ ಇರತಕ್ಕದ್ದು)

ಪರಂತು ಯಾವುದೇ ನೀಡಲಾದ ಲೈಸನ್ಸ್ ಅಥವಾ ಅನುಮತಿಯನ್ನು ರದ್ದುಗೊಳಿಸುವ ಪೂರ್ವದಲ್ಲಿ ಲೈಸನ್ಸ್‌ದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ವಾರಗಳ ಕಾಲಾವಕಾಶವನ್ನು ನೀಡದ ಹೊರತು ಅಂತಹ ಲೈಸನ್ಸನ್ನು ರದ್ದುಗೊಳಿಸತಕ್ಕದ್ದಲ್ಲ.

**12. ಲೈಸೆನ್ಸ್ ಅಥವಾ ಅನುಮತಿ ನೀಡುವಿಕೆಗೆ ಅಪವಾದಗಳು,**–ಕರ್ನಾಟಕ ಹೆದ್ದಾರಿ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 44) ರ ಪ್ರಕಾರ ಗ್ರಾಮಗಳ ಪರಿಮಿತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆ ನಿಗಧಿಪಡಿಸಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಗ್ರಾಮದ ರಸ್ತೆಗಳ ಗಡಿ ರೇಖೆ ಮತ್ತು ಕಟ್ಟಡ ರೇಖೆಗಳ ಅಂತರದೊಳಗೆ ಕಾನೂನುಬಾಹಿರವಾಗಿ ಯಾವುದೇ ವಾಣಿಜ್ಯ, ವ್ಯಾಪಾರ, ವಸತಿಯೇತರ, ಕೈಗಾರಿಕೆ ಉದ್ದೇಶದ ಚಟುವಟಿಕೆಗಳಿಗೆ ಲೈಸೆನ್ಸ್ ಅಥವಾ ಅನುಮತಿ ನೀಡಲು ಅವಕಾಶವಿರತಕ್ಕದ್ದಲ್ಲ.

## ಅಧ್ಯಾಯ–III
## ತೆರಿಗೆಗಳು

**13 ಕಟ್ಟಡಗಳು ಮತ್ತು ಖಾಲಿ ಜಾಗಗಳ ಮೇಲೆ ತೆರಿಗೆ ವಿಧಿಸುವುದು.**– ಈ ಅಧಿನಿಯಮದ 199ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ವಸತಿ, ವಾಣಿಜ್ಯ ಮತ್ತು ಕೈಗಾರಿಕೆ ಕಟ್ಟಡಗಳು ಹಾಗೂ ಖಾಲಿ ಜಾಗಗಳ ಅಥವಾ ಅವೆರಡರ ಮೇಲೆ; ವಸತಿಯೇತರ ಕಟ್ಟಡಗಳು ಹಾಗೂ ಖಾಲಿ ಜಾಗಗಳ ಮೇಲೆ ಅಥವಾ ಅವೆರಡರ ಮೇಲೆ; ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳ ಮೇಲೆ; ಭೂ ಪರಿವರ್ತಿತ ಖಾಲಿ ಜಮೀನು, ಖಾಲಿ ನಿವೇಶನ ಮೇಲೆ ತೆರಿಗೆಯನ್ನು ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು.

**14. ಕಾನೂನು ಬಾಹಿರ ಕಟ್ಟಡಗಳ ಮೇಲೆ ತೆರಿಗೆ ವಿಧಿಸುವುದು.**– ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನಿನಲ್ಲಿ, ಸ್ಥಳೀಯ ಸಂಸ್ಥೆಗಳ ಸ್ವತ್ತಿನಲ್ಲಿ, ಸರ್ಕಾರಿ ಸ್ವಾಮ್ಯದ ಶಾಸನಬದ್ಧ ಸಂಸ್ಥೆಗಳ ಸ್ವತ್ತಿನಲ್ಲಿ ಹೊರತುಪಡಿಸಿ, ಇತರೆ ಸ್ವತ್ತಿನಲ್ಲಿ ಕಟ್ಟಡ ನಿಯಮಗಳನ್ನು ಉಲ್ಲಂಘಿಸಿ ನಿರ್ಮಿತವಾಗಿರುವ ಕಟ್ಟಡಗಳಿಗೆ ಅಥವಾ ಅನಧಿಕೃತ ಬಡಾವಣೆಗಳ ಅಥವಾ ಕಂದಾಯ ಜಮೀನುಗಳ ಅಥವಾ ಕಟ್ಟಡಗಳು ಪೂರ್ಣಗೊಂಡಿರುವ ಬಗ್ಗೆ ದಾಖಲೆಗಳಿಲ್ಲದೆ ಅನುಭವಿಸುತ್ತಿರುವ ಕಟ್ಟಡಗಳ ಮೇಲೆ ಅಂಥ ಕಾನೂನು ಬಾಹಿರ ನಿರ್ಮಾಣವು ಉಳಿದಿರುವಷ್ಟು ಅವಧಿಯವರೆಗೆ ವಿಧಿಸತಕ್ಕ ಆಸ್ತಿ ತೆರಿಗೆಯ ಎರಡರಷ್ಟಕ್ಕೆ ಸಮನಾದ ತೆರಿಗೆಯನ್ನು ವಿಧಿಸತಕ್ಕದ್ದು, ಯಾವೊಬ್ಬವ್ಯಕ್ತಿಯು;–

(ಅ) ತನ್ನ ಭೂಮಿಯ ಮೇಲೆ ನಿಯಮಗಳಡಿಯಲ್ಲಿ ಅನುಮತಿಯನ್ನು ಪಡೆದುಕೊಳ್ಳದೆಯೇ ಅಥವಾ ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಷರತ್ತನ್ನು ಉಲ್ಲಂಘಿಸಿ; ಅಥವಾ

(ಆ) ಯಾವುದೇ ಕಾನೂನುಬಾಹಿರ ನಿರ್ಮಾಣದ ಸಂಬಂಧದಲ್ಲಿ ಅವನ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಹೂಡುವುದಕ್ಕೆ ಪ್ರತಿಕೂಲವಾಗದಂತೆ, ಅವನು ಪ್ರತಿ ವರ್ಷ ಅಂಥ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆಯು, ಅಂಥ ಕಾನೂನುಬಾಹಿರ ನಿರ್ಮಾಣ ಅಥವಾ ಪುನರ್ ನಿರ್ಮಾಣವನ್ನು ಸಕ್ರಮಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

**15. ತೆರಿಗೆ ನಿರ್ಧರಣಾ ವಿಧಾನ.–** (1) ಕಟ್ಟಡ ಮತ್ತು ಖಾಲಿ ಜಾಗಗಳ ಮೇಲೆ ನಿರ್ಧರಿಸಬಹುದಾದ ತೆರಿಗೆಯ ಲೆಕ್ಕಾಚಾರದ ವಿಧಿ ವಿಧಾನಗಳು ಅನುಸೂಚಿ–IV ಕ್ಕೆ ಅನುಗುಣವಾಗಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿರತಕ್ಕದ್ದು.

(2) ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಇತರೆ ಉದ್ದೇಶದ ಅಭಿವೃದ್ಧಿ ಹೊಂದದ ಭೂ ಪರಿವರ್ತಿತ ಖಾಲಿ ಜಮೀನು ಅಂದರೆ ಭೂಪರಿವರ್ತನೆಯಾದ ನಂತರ ಸಕ್ಷಮ ಪ್ರಾಧಿಕಾರದಿಂದ ಸ್ವತ್ತಿನ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯದೆ ಸ್ವತ್ತಿನ ಒಳಗೆ ಮೂಲಭೂತ ಸೌಕರ್ಯಗಳಾದ ಒಳಚರಂಡಿ, ರಸ್ತೆಗಳು ಇತ್ಯಾದಿ ಅಭಿವೃದ್ಧಿಪಡಿಸದೆ ಇರುವ ಜಮೀನಿನ ಬಂಡವಾಳ ಮೌಲ್ಯವನ್ನು ಕರ್ನಾಟಕ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು, ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ–1(1)(1)(ಅ) ಮತ್ತು 1(1)(2)ರಲ್ಲಿ ನಮೂದಿಸಿರುವ ದರಗಳಂತೆ ನಿರ್ಧರಿಸುವುದು ಮತ್ತು ಹೀಗೆ ನಿರ್ಧರಿಸಲಾದ ಬಂಡವಾಳ ಮೌಲ್ಯಗಳನ್ನು ಆಧರಿಸಿ ಈ ನಿಯಮಗಳ ಅನುಸೂಚಿ–IV ರಲ್ಲಿ ವಿವರಿಸಿದಂತೆ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವುದು.

(3) ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಇತರೆ ಉದ್ದೇಶಕ್ಕಾಗಿ ಭೂಪರಿವರ್ತನೆಯಾದ ನಂತರ ಸಕ್ಷಮ ಪ್ರಾಧಿಕಾರದಿಂದ ಸ್ವತ್ತಿನ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದ ಹಾಗೂ ಸ್ವತ್ತಿನ ಒಳಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ ಖಾಲಿ ಜಮೀನು/ಖಾಲಿ ನಿವೇಶನದ ಬಂಡವಾಳ ಮೌಲ್ಯವನ್ನು ಕರ್ನಾಟಕ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು, ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ–2ರಲ್ಲಿ ನಮೂದಿಸಿರುವ ನಿವೇಶನ ದರಗಳಂತೆ ನಿರ್ಧರಿಸುವುದು. ಮತ್ತು ಹೀಗೆ ನಿರ್ಧರಿಸಲಾದ ಬಂಡವಾಳ ಮೌಲ್ಯಗಳನ್ನು ಆಧರಿಸಿ ಈ ನಿಯಮದ ಅನುಸೂಚಿ–IV ರಲ್ಲಿ ವಿವರಿಸಿದಂತೆ ತೆರಿಗೆಯ ಪ್ರಮಾಣವನ್ನು ನಿರ್ಧರಿಸುವುದು:

(4)ತೆರಿಗೆಗೆ ಒಳಪಡುವ ವಸತಿ, ವಾಣಿಜ್ಯ, ವಸತಿಯೇತರ, ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ–2ರಲ್ಲಿ ನಮೂದಿಸಿರುವ ನಿವೇಶನ ದರಗಳಂತೆ ನಿರ್ಮಿತ ಪ್ರದೇಶದ ನಿವೇಶನದ ಬಂಡವಾಳ ಮೌಲ್ಯ ಹಾಗೂ ಅನುಬಂಧ–1(2)ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳಮಹಡಿ/ನೆಲಮಹಡಿ/ಮೇಲ್ಮಹಡಿ ದರಗಳ ಆಧಾರದ ಮೇಲೆ ಕಟ್ಟಡದ ಚ.ಮೀ. ಗೆ ಇರುವ ಮಾರ್ಗಸೂಚಿ ದರವನ್ನು ನಿರ್ಮಿತ ಕಟ್ಟಡದ ಒಟ್ಟು ವಿಸ್ತೀರ್ಣಕ್ಕೆ ಲೆಕ್ಕಾಚಾರ ಮಾಡಿದಾಗ ಬರುವ ಮೌಲ್ಯದಲ್ಲಿ ಸವಕಳಿ ಮೌಲ್ಯವನ್ನು ಕಳೆದ ನಂತರದ ಒಟ್ಟು ಬಂಡವಾಳ ಮೌಲ್ಯದ ಮೇಲೆ ಈ ನಿಯಮಗಳ ಕೋಷ್ಟಕ–1ಎ ರಲ್ಲಿ ವಿವರಿಸಿದಂತೆ ತೆರಿಗೆಯನ್ನು ನಿರ್ಧರಿಸತಕ್ಕದ್ದು.

(5) ತೆರಿಗೆಗೆ ಒಳಪಡುವ ಅಪಾರ್ಟ್‌ಮೆಂಟ್/ ಫ್ಲಾಟ್/ ವಿಲ್ಲಾಮೆಂಟ್ / ಟೆನಮೆಂಟ್ / ಬಹುಮಾಲೀಕತ್ವದ ಕಟ್ಟಡಗಳ ಬಂಡವಾಳ ಮೌಲ್ಯವನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಅನುಬಂಧ–2 ರಲ್ಲಿಯ ಸೂಪರ್ ಬಿಲ್ಟಪ್ ಏರಿಯಾ ದರಗಳಿಗೆ ಹೆಚ್ಚುವರಿ ಅಂತಸ್ತಿನ ಮೌಲ್ಯ ಮಾತ್ರ ಅಳವಡಿಸಿ, ಅನುಬಂಧ–3ರಲ್ಲಿಯ ಸೂಪರ್ ಬಿಲ್ಟಪ್ ಏರಿಯಾದ ದರಗಳಿಗೆ ಹೆಚ್ಚುವರಿ ಅಂತಸ್ತಿನ ಮೌಲ್ಯ ಮತ್ತು ಮೇಲಂತಸ್ತು, ವಿಶೇಷ ಸವಲತ್ತು ದರಗಳನ್ನು ಅಳವಡಿಸಿ ನಿರ್ಧರಿಸಿದಂತೆ ಇರತಕ್ಕದ್ದು.

(6) ತೆರಿಗೆಗೆ ಒಳಪಡುವ ಕೈಗಾರಿಕೆ, ಉತ್ಪಾದನಾಘಟಕ, ತಯಾರಿಕಾ ಘಟಕಗಳು, ಕಾರ್ಖಾನೆಗಳು, ಐಟಿ ಪಾರ್ಕ್‌ಗಳು, ಹಾರ್ಡ್‌ವೇರ್ ಪಾರ್ಕ್, ಟೆಕ್ಸ್‌ಟೈಲ್ ಪಾರ್ಕ್,

ಬಯೋಟೆಕ್ ಪಾರ್ಕ್, ಏರ್‌ಪೋರ್ಟ್ ಮತ್ತು ಇವುಗಳಿಗೆ ಸಂಬಂಧಿಸಿದ ಪ್ರದೇಶ ಇತ್ಯಾದಿಗಳು, ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕಾ ಪ್ರದೇಶದ ಹಾಗೂ ಇತರೆ ವಿಶೇಷ ಆರ್ಥಿಕ ವಲಯದ ಕೈಗಾರಿಕಾ ಪ್ರದೇಶ ಅಥವಾ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ವಲಯಗಳ ಕೈಗಾರಿಕಾ/ಘಟಕಗಳ ಕಟ್ಟಡದ ಬಂಡವಾಳ ಮೌಲ್ಯವನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಅನುಬಂಧ-1(2)ರಲ್ಲಿನ ಪ್ರಸ್ತಾವಿತ ಕಟ್ಟಡಗಳ ತರಹದ ತಳಮಹಡಿ/ನೆಲಮಹಡಿ/ಮೇಲ್ಮಹಡಿ ದರಗಳ ಆಧಾರದ ಮೇಲೆ ಮತ್ತು ಅವುಗಳು ಹೊಂದಿರುವ ಅಭಿವೃದ್ಧಿ ಹೊಂದದ ಖಾಲಿ ಭೂಪರಿವರ್ತಿತ ಜಮೀನಿಗೆ ಅನುಬಂಧ-1(2)ರಲ್ಲಿ ನಮೂದಿಸಿರುವ ದರಗಳ ಆಧಾರದ ಮೇಲೆ ಹಾಗೂ ಖಾಲಿ ನಿವೇಶನಕ್ಕೆ ಅನುಬಂಧ-2ರಲ್ಲಿ ನಮೂದಿಸಿರುವ ದರಗಳ ಆಧಾರದ ಮೇಲೆ ನಿಗಧಿಪಡಿಸಿದಂತೆ ಇರತಕ್ಕದ್ದು.

(7) ಕರ್ನಾಟಕ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಪಿಡಬ್ಲ್ಯೂಡಿ 35 ಆರ್‌ಡಿಎಫ್ 2010 ಬೆಂಗಳೂರು, ದಿನಾಂಕ:24.06.2014 ರಡಿಯಲ್ಲಿ ಕಟ್ಟಡಗಳ ವಾರ್ಷಿಕ ಸವಕಳಿ ದರಗಳು ಮತ್ತು ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ಪ್ರಕಟಿಸುವ ವಾರ್ಷಿಕ ಸವಕಳಿಯ ಮೌಲ್ಯದಂತೆ ಈ ನಿಯಮದಡಿ ಅನುಸೂಚಿ-IV ರಲ್ಲಿ ಅಳವಡಿಸಿದಂತೆ ವಾರ್ಷಿಕ ಸವಕಳಿಯ ಮೌಲ್ಯವನ್ನು ನಿರ್ಧರಿಸುವುದು.

(8) ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿಯ ಅನುಬಂಧ-1(3)ರಲ್ಲಿನ ಸ್ವತ್ತಿನ ಒಟ್ಟು ಮೌಲ್ಯಗಳಿಗೆ ಅನ್ವಯಿಸುವ ಪಾರ್ಕಿಂಗ್(ವಾಹನ ನಿಲ್ದಾಣ) ದರಗಳು ನಿಗಧಿಪಡಿಸಿದಂತೆ ಇರತಕ್ಕದ್ದು.

**16 ತೆರಿಗೆ ವಿನಾಯಿತಿ.-** ಅಧಿನಿಯಮದ 199ನೇ ಪ್ರಕರಣದ (1) ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ವಿಧಿಸುವುದರಿಂದ ಕೆಳಕಂಡ ಕಟ್ಟಡಗಳು ಮತ್ತು ಭೂಮಿಗಳಿಗೆ ವಿನಾಯಿತಿ ನೀಡತಕ್ಕದ್ದು, ಎಂದರೆ,-

(ಅ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಖಾಲಿ ನಿವೇಶನಗಳು;

(ಆ) ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸೇರಿದ ಕಟ್ಟಡಗಳು ಮತ್ತು ಖಾಲಿ ನಿವೇಶನಗಳು;

(ಇ) ಸಂಪೂರ್ಣವಾಗಿ ಧರ್ಮಾರ್ಥ ಸಂಸ್ಥೆಗಳು ಅಂದರೆ, ಕರ್ನಾಟಕ ಧಾರ್ಮಿಕ ಮತ್ತು ದತ್ತಿ ಕಾಯ್ದೆಯಡಿ ನೊಂದಾಯಿತ ಸಂಸ್ಥೆಗಳು, ಸಾರ್ವಜನಿಕ ಉದ್ದೇಶಗಳಿಗಾಗಿ ಮಾತ್ರವೇ ಉಪಯೋಗಿಸುವ, ಆದಾಯ ತೆರಿಗೆ ಅಧಿನಿಯಮ, 1961ರ ಪ್ರಕರಣ 80ಜಿ ರಡಿಯಲ್ಲಿ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆದಿರುವ ಮತ್ತು ಬಾಡಿಗೆಗೆ ಕೊಟ್ಟಿರದ ಕಟ್ಟಡಗಳು ಮತ್ತು ಖಾಲಿ ಜಾಗಗಳು;

(ಈ) ಸೈನಿಕರು, ಮಾಜಿ ಸೈನಿಕರು, ಸೈನಿಕರ ವಿಧವಾ ಮಹಿಳೆಯರ ಸ್ವಂತ ವಾಸದ ಕಟ್ಟಡಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು.

(ಉ) ವಿಶೇಷ ಚೇತನರು ಮತ್ತು ವಿಧವೆಯರು, ಹೆಚ್.ಐ.ವಿ (ಏಡ್ಸ್), ಕುಷ್ಠರೋಗ ಪೀಡಿತ ಮಾಲೀಕರ ವಾಸದ ಮನೆಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು;

(ಊ) ಸರ್ಕಾರದ ಯೋಜನೆಗಳಡಿ ನೋಂದಾಯಿಸಲ್ಪಟ್ಟ ಮಹಿಳಾ ಸ್ವಸಹಾಯ ಸಂಘ/ ಒಕ್ಕೂಟಗಳು, ವಿಶೇಷ ಚೇತನರು ನಡೆಸುವ ಸಣ್ಣ ವಾಣಿಜ್ಯ/ ಉದ್ಯಮ ಘಟಕಗಳಿಗೆ ಶೇಕಡ 50 ರಷ್ಟು ವಿನಾಯತಿ ನೀಡತಕ್ಕದ್ದು;

**(ಋ)** ಸ್ವ-ನಿರ್ವಹಣೆಯ ಪ್ರತ್ಯೇಕ ನಾಗರೀಕ ಸೌಲಭ್ಯಗಳನ್ನು ಹೊಂದಿರುವ ವಸತಿ ಬಡಾವಣೆಯ ಆಸ್ತಿಗಳಿಗೆ ಶೇಕಡ 50ರಷ್ಟು ವಿನಾಯತಿ ನೀಡತಕ್ಕದ್ದು;

(ಎ) ಸ್ವ-ನಿರ್ವಹಣೆಯ ಪ್ರತ್ಯೇಕ ನಾಗರೀಕ ಸೌಲಭ್ಯಗಳನ್ನು ಹೊಂದಿರುವ ಶೈಕ್ಷಣಿಕ ಸಂಸ್ಥೆಗಳ ಆಸ್ತಿಗಳಿಗೆ ಶೇಕಡ 25ರಷ್ಟು ವಿನಾಯತಿ ನೀಡತಕ್ಕದ್ದು;

**(ಏ)** ಆರ್ಥಿಕ ವರ್ಷದ ಪ್ರಾರಂಭದ ಮೂರು ತಿಂಗಳ ಒಳಗಾಗಿ ಪ್ರಸಕ್ತ ಸಾಲಿನ ಸಂಪೂರ್ಣ ತೆರಿಗೆಯನ್ನು ಪಾವತಿಸುವವರಿಗೆ ಶೇಕಡ5ರಷ್ಟು ವಿನಾಯತಿ ನೀಡತಕ್ಕದ್ದು;

**(ಐ)** ಕೈಗಾರಿಕೆ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರಗಳ ವ್ಯಾಪ್ತಿಯ ಖಾಲಿ ಜಾಗಗಳಲ್ಲಿ ನೆಡುತೋಪು/ಹಸಿರೀಕರಣ (ಲ್ಯಾಂಡಸ್ಕೇಪ್)ಗಳನ್ನು ಬೆಳೆಸಿರುವ ಪ್ರದೇಶಗಳಿಗೆ ವಿನಾಯಿತಿ ನೀಡತಕ್ಕದ್ದು;

(ಒ) ಕಂದಾಯ/ಅರಣ್ಯ/ ಮುಜರಾಯಿ ಇಲಾಖೆ ಮತ್ತಿತರೆ ಸರ್ಕಾರದ ಇಲಾಖೆಗಳಿಂದ ನವೀಕರಿಸಬಹುದಾದ ಇಂಧನ ಘಟಕಕ್ಕೆ ಗುತ್ತಿಗೆ ಆಧಾರದಮೇಲೆ ಪಡೆದ ಉಪಯೋಗಿಸದೇ ಇರುವ ಉಳಿಕೆ ಖಾಲಿ ಜಮೀನುಗಳಿಗೆ ವಿನಾಯಿತಿ ನೀಡತಕ್ಕದ್ದು;

**(ಔ)** ಸೌರ ವಿದ್ಯುತ್ ಉತ್ಪಾದನಾ ಘಟಕ ಅಳವಡಿಸಿದ ವಾಸದ ಕಟ್ಟಡಗಳಿಗೆ ಶೇಕಡ10ರಷ್ಟು ವಿನಾಯತಿ ನೀಡತಕ್ಕದ್ದು; ಮತ್ತು

(ಅಂ) ಹಸಿ ಕಸ ಸಂಸ್ಕರಣೆ, ಮಳೆ ನೀರು ಕೊಯ್ಲು ಅಳವಡಿಸಿದ ವಾಸದ ಕಟ್ಟಡಗಳಿಗೆ ಶೇಕಡ 10ರಷ್ಟು ವಿನಾಯತಿ ನೀಡತಕ್ಕದ್ದು.

**17. ಆಸ್ತಿಗಳ ಸಮೀಕ್ಷೆ ನಡೆಸುವುದು.–** ಅಧಿನಿಯಮದ ಪ್ರಕರಣ 199ಕ್ಕೆ ಅನುಗುಣವಾಗಿ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಲು, ತೆರಿಗೆಗೆ ಗುರಿಯಾಗತಕ್ಕ ಎಲ್ಲಾ ಕಟ್ಟಡಗಳು ಹಾಗೂ ಖಾಲಿ ಜಾಗಗಳ ಸಮಗ್ರ ಸಮೀಕ್ಷೆಯನ್ನು ನಡೆಸತಕ್ಕದ್ದು. ನಿರ್ದಿಷ್ಟಪಡಿಸಿದ ಆಸ್ತಿ ಮತ್ತು ಆಸ್ತಿ ತೆರಿಗೆ ನಮೂನೆಯಲ್ಲಿ ಕಟ್ಟಡ, ಖಾಲಿ ಜಾಗ ಅಥವಾ ಅವರೆಡರ ಮೇಲೆ, ಕಟ್ಟಡದ ನಿರ್ಮಾಣ, ಉಪಯೋಗ, ಕಟ್ಟಡದ ಅವಧಿ, ಇತರೆ ವಿವರಗಳನ್ನು ಪಡೆದು, ತೆರಿಗೆ ಲೆಕ್ಕಚಾರ ಮಾಡಿ ಆಸ್ತಿ ರಿಜಿಸ್ಟರ್‌ಗಳಲ್ಲಿ ದಾಖಲಿಸಿ ನಿಗಧಿಪಡಿಸಿದ ದರಗಳಂತೆ ತೆರಿಗೆ ವಿಧಿಸಲು ಕ್ರಮ ಕೈಗೊಳ್ಳುವುದು. ಈ ಪ್ರಕ್ರಿಯೆಯನ್ನು ಪ್ರತಿ ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ ಕೈಗೊಂಡು ಹೊಸದಾಗಿ ಸೃಜಿಸಲ್ಪಟ್ಟ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸತಕ್ಕದ್ದು.

**18. ಆಸ್ತಿ ವಿವರಗಳು, ತೆರಿಗೆ ನಿರ್ಧರಣೆ, ಬೇಡಿಕೆ, ವಸೂಲಾತಿ ಮತ್ತು ಬಾಕಿ ರಿಜಿಸ್ಟರ್.–** (1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರನ್ವಯ ನಮೂನೆ-9(ಎ) ವಹಿಯಲ್ಲಿ ದಾಖಲಿಸಲಾದ ಆಸ್ತಿಗಳಿಗೆ ನಿರ್ಧರಿಸಲಾಗುವ ತೆರಿಗೆ ಹಾಗೂ ತೆರಿಗೆ ಬೇಡಿಕೆ, ವಸೂಲಾತಿ ಮತ್ತು

ಬಾಕಿ ವಿವರಗಳನ್ನು ನಿಗಧಿತ ನಮೂನೆ-9 ಹಾಗೂ ನಮೂನೆ-11ಎ ಮತ್ತು ನಮೂನೆ-11ಬಿ ವಹಿಗಳಲ್ಲಿ ದಾಖಲಿಸುವುದು.

**19. ತೆರಿಗೆ ನಿರ್ಧರಣೆ, ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಯ ಉದ್ಧೃತ ಭಾಗ ನೀಡುವುದು,-** ತೆರಿಗೆ ನಿರ್ಧರಣೆ, ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಗಳಲ್ಲಿನ ವಿವರಗಳನ್ನು ಒಳಗೊಂಡ ನಮೂನೆ-9, ನಮೂನೆ-11ಎ ಮತ್ತು ನಮೂನೆ-11ಬಿ ಯ ಉದ್ಧೃತ ಭಾಗವನ್ನು ಆಸ್ತಿಯ ಮಾಲೀಕನಿಗೆ ಅಥವಾ ಕೋರಿಕೆ ಸಲ್ಲಿಸಿದವರಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನೀಡತಕ್ಕದ್ದು.

**20. ಆಸ್ತಿ ವಿವರಗಳ ವಹಿಯಲ್ಲಿ ಮಾಲೀಕನ ಹೆಸರು ಹಾಗೂ ವಿವರಗಳ ಸೇರ್ಪಡೆ ಮತ್ತು ಮಾರ್ಪಾಟು.-** ಗ್ರಾಮ ಪಂಚಾಯತಿಯ ಆಸ್ತಿ ವಹಿಯಲ್ಲಿನ ವಿವರಗಳು ಅಂದರೆ ಮಾಲೀಕನ ಹೆಸರು, ಆಸ್ತಿಯ ಚೆಕ್ಕುಬಂದಿ, ಅಳತೆ, ತೆರಿಗೆಯ ವಿವರಗಳು ಆಸ್ತಿಯ ಮಾರಾಟ, ವಿಭಾಗ, ವರ್ಗಾವಣೆ, ದಾನ, ವಿಲ್, ಗಿಫ್ಟ್‌ಡೀಡ್, ವಿಲ್, ರಿಲೀಜ್‌ಡೀಡ್, ಸೆಟಲ್‌ಮೆಂಟ್, ಅದಲುಬದಲು ಹಾಗೂ ಇತರೆ ಮೂಲಕ ಬದಲಾವಣೆಯಾದಲ್ಲಿ ಹಾಗೂ ಕಟ್ಟಡ/ಖಾಲಿ ಜಾಗದ ಸಂಬಂಧದಲ್ಲಿ ಹೊಸದಾಗಿ ನಿರ್ಮಿಸಿದ, ಪುನರ್‌ನಿರ್ಮಿಸಿದ, ವಿಸ್ತರಿಸಿದ ವಿವರಗಳನ್ನು ಸೇರ್ಪಡೆ ಮತ್ತು ಮಾರ್ಪಾಟು ಮಾಡತಕ್ಕದ್ದು.

ಪರಂತು ಅಂಥ ವರ್ಗಾವಣೆ ಮಾಡುವ ಮೊದಲು ಅಥವಾ ಮೃತ ಒಡೆಯನ ಕಾನೂನು ಸಮ್ಮತ ವಾರಸುದಾರರ ಹೆಸರುಗಳನ್ನು ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಪ್ರತಿಯೋಜಿಸುವ ಮುನ್ನ ಗ್ರಾಮ ಪಂಚಾಯಿತಿಯು ಸದರಿ ವಿಷಯವನ್ನು ಸಾರ್ವಜನಿಕವಾಗಿ ಹಾಗೂ ಗ್ರಾಮ ಪಂಚಾಯಿತಿ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸತಕ್ಕದ್ದು. ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸ್ವೀಕೃತವಾದ ಆಕ್ಷೇಪಣೆ: ಸಲಹೆಗಳನ್ನು ಪರಿಗಣಿಸಿದ ನಂತರ ಗ್ರಾಮ ಪಂಚಾಯಿತಿಯು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ನಿರ್ಧಾರವನ್ನು ಲಿಖಿತ ಮೂಲಕ ಅರ್ಜಿದಾರರಿಗೆ ತಿಳಿಸತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ಪ್ರತಿಯೋಜಿಸತಕ್ಕದ್ದು.

**21. ಕಟ್ಟಡವನ್ನು ಕೆಡವಿ ಹಾಕುವ ಅಥವಾ ತೆಗೆದುಹಾಕುವ ಸಂದರ್ಭದಲ್ಲಿ ಕ್ರಮ.-** ಈ ನಿಯಮಗಳ ಮೇರೆಗೆ ತೆರಿಗೆಗೆ ಒಳಗಾದ ಕಟ್ಟಡದ ಮಾಲೀಕನು ಅಂಥ ಕಟ್ಟಡವನ್ನು ಯಾವುದೇ ಕಾರಣಕ್ಕೆ ಕೆಡವಿ ಹಾಕಿದರೆ, ಅದರ ಬಗ್ಗೆ ಗ್ರಾಮ ಪಂಚಾಯಿತಿಗೆ ಮಾಹಿತಿ ನೀಡತಕ್ಕದ್ದು. ಮಾಹಿತಿ ನೀಡಿದ ನಂತರ ಕೆಡವಿ ಹಾಕಿರುವುದನ್ನು ಗ್ರಾಮ ಪಂಚಾಯಿತಿಯು ಖಚಿತಪಡಿಸಿಕೊಂಡು, ಆಸ್ತಿ ವಿವರಗಳ ವಹಿಯಲ್ಲಿ ಸೂಕ್ತ ಬದಲಾವಣೆ ತರುವುದು. ಹಾಗೂ ಅದಕ್ಕನುಗುಣವಾಗಿ ತೆರಿಗೆ ಸ್ವರೂಪವನ್ನು ಬದಲಾಯಿಸತಕ್ಕದ್ದು.

**22. ಅಧಿಭೋಗದಾರನು ತೆರಿಗೆಯನ್ನು ಸಂದಾಯ ಮಾಡುವುದು.-** ಯಾವುದೇ ಕಟ್ಟಡ ಅಥವಾ ಭೂಮಿಯ ಮಾಲೀಕನು ತನ್ನ ಕಟ್ಟಡ ಅಥವಾ ಖಾಲಿ ಜಾಗವನ್ನು ಬಾಡಿಗೆ ಅಥವಾ ಗುತ್ತಿಗೆ ಅಥವಾ ಇನ್ನಿತರ ರೂಪದಲ್ಲಿ ಬೇರೆಯವರ ಅನುಭವಕ್ಕೆ ನೀಡಿದ್ದಲ್ಲಿ, ಮಾಲೀಕನು ಸ್ವತ್ತಿನ ತೆರಿಗೆಯನ್ನು ಪಾವತಿಸುವುದು. ಒಂದು ವೇಳೆ ಮಾಲೀಕನು ಅಂತಹ ಸ್ವತ್ತಿನ ತೆರಿಗೆಯನ್ನು ಪಾವತಿಸದಿದ್ದಲ್ಲಿ, ಬಾಡಿಗೆದಾರ/ಅಧಿಭೋಗದಾರರು ಮಾಲೀಕನ ಹೆಸರಿನಲ್ಲಿ ಅಂಥ ಸ್ವತ್ತು ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ–IV
## ದರಗಳು

**23. ನೀರು ಸರಬರಾಜು ದರವನ್ನು ವಿಧಿಸುವುದು.–** (1) 199ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿಗಳಿಗೆ ಸರಬರಾಜು ಮಾಡಲಾಗುವ ಕುಡಿಯುವ ನೀರಿಗೆ ಪ್ರತಿ ಮಾಹೆ ನೀರಿನ ದರ ವಿಧಿಸತಕ್ಕದ್ದು. ದರಗಳನ್ನು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ನಿರ್ಧಿಷ್ಟಪಡಿಸಿದಂತೆ ನಿಗಧಿಪಡಿಸತಕ್ಕದ್ದು.:–

## ಅಧ್ಯಾಯ–V
## ಫೀಜುಗಳು (ಶುಲ್ಕಗಳು)

**24. ಶುಲ್ಕಗಳನ್ನು ವಿಧಿಸುವುದು.–** ಅಧಿನಿಯಮದ 199ನೇ ಪ್ರಕರಣದ (3)ನೇ ಉಪಖಂಡದ ಅಡಿಯಲ್ಲಿ ನಿಯಮಿಸಬಹುದಾದ ಫೀಜುಗಳು ಅಥವಾ ಶುಲ್ಕಗಳನ್ನು ಈ ಕೆಳಕಂಡಂತೆ ವಿಧಿಸತಕ್ಕದ್ದು:–

**(ಅ) ಕಟ್ಟಡ ನಿರ್ಮಾಣ ಅನುಮತಿ ಅಥವಾ ಲೈಸೆನ್ಸ್ ಶುಲ್ಕ.–**ಅಧಿನಿಯಮದ ಪ್ರಕರಣ 64ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ವಸತಿ, ವಾಣಿಜ್ಯ, ವಸತಿಯೇತರ, ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಘಟಕದ ಕಟ್ಟಡಗಳ ನಿರ್ಮಾಣ, ಪುನರ್ ನಿರ್ಮಾಣ, ಸೇರ್ಪಡೆ ಅಥವಾ ವಿಸ್ತರಣೆಗಳಿಗೆ ನೀಡಲಾಗುವ ಮತ್ತು ನವೀಕರಿಸಲಾಗುವ ಅನುಮತಿ ಅಥವಾ ಲೈಸೆನ್ಸ್ ಶುಲ್ಕಗಳು ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ/ತಾಲ್ಲೂಕು ಪಂಚಾಯಿತಿಗಳ/ಗ್ರಾಮ ಪಂಚಾಯಿತಿಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು 2015ರಲ್ಲಿ ನಿಗಧಿಪಡಿಸಿರುವಂತೆ ಇರತಕ್ಕದ್ದು;

**(ಆ) ಕಾರ್ಖಾನೆ ನಿರ್ಮಾಣ ಮತ್ತು ಯಂತ್ರೋಪಕರಣ, ಕೃಷಿ ಆಧಾರಿತ ಉತ್ಪಾದನಾ ಘಟಕ ಸ್ಥಾಪನೆ ಅನುಮತಿ ಶುಲ್ಕ.–**ಅಧಿನಿಯಮದ ಪ್ರಕರಣ 66 ಮತ್ತು 70ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ಕೈಗಾರಿಕೆ, ಕೃಷಿ ಆಧಾರಿತ ಉತ್ಪಾದನಾ ಘಟಕ, ಕಾರ್ಖಾನೆ, ಕಾರ್ಯಾಗಾರ ಅಥವಾ ಕೆಲಸದ ಸ್ಥಳದ ನಿರ್ಮಾಣ ಹಾಗೂ ಯಂತ್ರೋಪಕರಣ ಅಥವಾ ತಯಾರಿಕಾ ಸ್ಥಾವರದ ಸ್ಥಾಪನೆಗೆ ಒಂದು ಸಲ ನೀಡಲಾಗುವ ಪ್ರಾರಂಭಿಕ ಅಥವಾ ಘಟನೋತ್ತರ ಅನುಮತಿ ಶುಲ್ಕಗಳು ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ/ತಾಲ್ಲೂಕು ಪಂಚಾಯಿತಿಗಳ/ಗ್ರಾಮ ಪಂಚಾಯಿತಿಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು 2015ರಲ್ಲಿ ನಿಗಧಿಪಡಿಸಿರುವಂತೆ ಇರತಕ್ಕದ್ದು;

**(ಇ) ವಾಣಿಜ್ಯ, ವಸತಿಯೇತರ ವ್ಯವಹಾರ ಲೈಸೆನ್ಸ್ ಶುಲ್ಕ.–**ಅಧಿನಿಯಮದ ಪ್ರಕರಣ 67, 68, 69 ಮತ್ತು 70ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ವ್ಯಾಪಾರಕ್ಕಾಗಿ ಅಥವಾ ವ್ಯವಹಾರಕ್ಕಾಗಿ ಪ್ರಾರಂಭಿಸಲಾಗುವ ಎಲ್ಲಾ ವಿಧದ ವಾಣಿಜ್ಯ, ವಸತಿಯೇತರ ಚಟುವಟಿಕೆಗಳಿಗೆ ನೀಡಲಾಗುವ ಮತ್ತು ನವೀಕರಿಸಲಾಗುವ ಲೈಸೆನ್ಸ್ ಶುಲ್ಕಗಳು ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ/ತಾಲ್ಲೂಕು ಪಂಚಾಯಿತಿಗಳ/ಗ್ರಾಮ

ಪಂಚಾಯಿತಿಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು 2015ರಲ್ಲಿ ನಿಗಧಿಪಡಿಸಿರುವಂತೆ ಇರತಕ್ಕದ್ದು;

(ಈ) **ನಿರಾಕ್ಷೇಪಣಾ ಪತ್ರ ಶುಲ್ಕ.**–ಅಧಿನಿಯಮದ 199ನೇ ಪ್ರಕರಣದ (3)(ಜೆ) ಉಪ–ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ವಿವಿಧ ಉದ್ದೇಶಗಳಿಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ನೀಡಲಾಗುವ ನಿರಾಕ್ಷೇಪಣಾ ಪತ್ರಗಳಿಗೆ ರೂ.200/– ಶುಲ್ಕ ವಿಧಿಸತಕ್ಕದ್ದು;

(ಉ) **ಇ–ಸ್ವತ್ತು ಹಾಗೂ ಬಾಪೂಜಿ ಸೇವಾ ಕೇಂದ್ರದ ಮೂಲಕ ನೀಡುವ ಸೇವಾ ಶುಲ್ಕ.**– ಅಧಿನಿಯಮದ 199ನೇ ಪ್ರಕರಣದ (3)(ಜೆ) ಉಪ–ಪ್ರಕರಣದ ಮೇರೆಗೆ ನಿಯಮಿಸ ಬಹುದಾದಂತೆ, ಇ–ಸ್ವತ್ತು ತಂತ್ರಾಂಶದ ಮೂಲಕ ವಿತರಿಸಲಾಗುವ ನಮೂನೆ–9 ಹಾಗೂ ನಮೂನೆ–11ಎ ಮತ್ತು ನಮೂನೆ–11ಬಿ ಪ್ರತಿಗಳಿಗೆ ಹಾಗೂ ಬಾಪೂಜಿ ಸೇವಾ ಕೇಂದ್ರದ ಮೂಲಕ ನೀಡುವ ಪ್ರತಿ ಸೇವೆಗಳಿಗೆ ರೂ. 50/– ಶುಲ್ಕ ವಿಧಿಸತಕ್ಕದ್ದು;

(ಊ) **ಆಸ್ತಿ ವಿವರಗಳ ವಹಿಯಲ್ಲಿ ಮಾಲೀಕನ ಹೆಸರು ಸೇರ್ಪಡೆ, ಬದಲಾವಣೆ ಶುಲ್ಕ.**– ಅಧಿನಿಯಮದ 199ನೇ ಪ್ರಕರಣದ (3)(ಜೆ) ಉಪ–ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗ್ರಾಮ ಪಂಚಾಯತಿಯ ಆಸ್ತಿ ವಿವರಗಳ ವಹಿಯಲ್ಲಿ ಪಿತ್ರಾರ್ಜಿತ ಆಸ್ತಿ, ಆಸ್ತಿವಿಭಜನೆ, ಆಸ್ತಿ ಮಾರಾಟ, ಗಿಫ್ಟ್‌ಡೀಡ್, ವಿಲ್, ಹಕ್ಕುಪತ್ರ, ಸೇಲ್‌ಡೀಡ್, ರಿಲೀಜ್‌ಡೀಡ್, ವರ್ಗಾವಣೆ, ಸೆಟಲ್‌ಮೆಂಟ್, ಇತರೆ ವ್ಯವಹರಣೆಗಳ ಮೂಲಕ ಆಸ್ತಿಯ ಸ್ವರೂಪ, ಮಾಲೀಕರ ಹೆಸರು ಮತ್ತು ವಿವರ ಸೇರ್ಪಡೆ, ಬದಲಾವಣೆಗೆ ರೂ.1000/–ಶುಲ್ಕವನ್ನು ವಿಧಿಸತಕ್ಕದ್ದು;

(ಋ) **ಮನೆಗಳಿಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲು ಶುಲ್ಕ.**– ಮನೆಗಳಿಗೆ ನಲ್ಲಿ ನೀರು ನೇರ ಸಂಪರ್ಕ ಪಡೆಯಲು ಒಂದು ಬಾರಿಗೆ ಈ ಕೆಳಗಿನಂತೆ ಶುಲ್ಕ ಪಡೆಯುವುದು;

(i) ವಸತಿ ಕಟ್ಟಡಗಳಿಗೆ ಸಂಪರ್ಕ ರೂ.2,000/– ; ಮತ್ತು

(ii) ವಾಣಿಜ್ಯ / ವಸತಿಯೇತರ, ಇತರೆ ಕಟ್ಟಡಗಳಿಗೆ ಸಂಪರ್ಕರೂ. 3,000/–

(ಎ) **ನೈರ್ಮಲ್ಯ ಶುಲ್ಕ.**–ಅಧಿನಿಯಮದ199ನೇ ಪ್ರಕರಣದ (3)(ಜೆ) ಉಪ–ಪ್ರಕರಣದ ಮೇರೆಗೆ ನಿಯಮಿಸಬಹುದಾದಂತೆ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನೈರ್ಮಲ್ಯ ಶುಚಿತ್ವ ಕಾಪಾಡುವ ದಿಸೆಯಲ್ಲಿ ಪ್ರತಿ ಕುಟುಂಬಕ್ಕೆ ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ನಿರ್ಧಿಷ್ಟಪಡಿಸಿದಂತೆ ನೈರ್ಮಲ್ಯ ಶುಲ್ಕ ವಿಧಿಸತಕ್ಕದ್ದು;

(ಏ) **ಸಂತೆ, ಮಾರುಕಟ್ಟೆ ಹಾಗೂ ರಸ್ತೆ ಬದಿ ಮಾರಾಟ ಸ್ಥಳಗಳಿಗೆ ವಿಧಿಸುವ ಶುಲ್ಕ.**– ಅಧಿನಿಯಮದ ಪ್ರಕರಣ199ರ ಉಪ–ಪ್ರಕರಣ (3)(ಇ)ರಡಿಯಲ್ಲಿಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ಸಂತೆ, ಮಾರುಕಟ್ಟೆ ಹಾಗೂ ರಸ್ತೆ ಬದಿ ಮಾರಾಟ ಸ್ಥಳಗಳಿಗೆ ಪ್ರತಿ ದಿನಕ್ಕೆ ವಿಧಿಸುವ ಶುಲ್ಕ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಅನುಸೂಚಿ–IV ರಲ್ಲಿ ಇರುವಂತೆ ಇರತಕ್ಕದ್ದು;

(ಐ) **ವಾಹನ ನಿಲ್ದಾಣ ಶುಲ್ಕ.**-ಅಧಿನಿಯಮದ ಪ್ರಕರಣ199ರ ಉಪ-ಪ್ರಕರಣ (3)(ಜಿ)ರಡಿಯಲ್ಲಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯಲ್ಲಿ ಪ್ರವಾಸಿ ಸ್ಥಳ, ಪ್ರೇಕ್ಷಣೀಯ ಸ್ಥಳ, ಯಾತ್ರಾ ಸ್ಥಳ ಇತರೆ ಜಾಗಗಳಲ್ಲಿ ಗ್ರಾಮ ಪಂಚಾಯಿತಿಯಿಂದಲೇ ಒದಗಿಸಿದ ವಾಹನ ನಿಲ್ದಾಣಗಳಲ್ಲಿ, ಬಸ್ಸು, ಲಾರಿಗಳ ಮೇಲೆ ಪ್ರತಿ ದಿನಕ್ಕೆ ವಿಧಿಸುವ ಶುಲ್ಕ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಅನುಸೂಚಿ-IV ರಲ್ಲಿ ಇರುವಂತೆ ಇರತಕ್ಕದ್ದು;

(ಒ) **ಫೈಬರ್ ಕೇಬಲ್, ಗ್ಯಾಸ್/ಪೆಟ್ರೋಲಿಯಮ್, ಇತರೆ ಪೈಪ್ ಲೈನ್ ಹಾಕುವುದಕ್ಕಾಗಿ ಶುಲ್ಕ.**- ಅಧಿನಿಯಮದ ಪ್ರಕರಣ199ರ ಉಪ-ಪ್ರಕರಣ (3)(ಐ)ರಡಿಯಲ್ಲಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯಲ್ಲಿ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ವರ್ತುಲ ರಸ್ತೆ, ಬೈಪಾಸ್‌ರಸ್ತೆ, ಜಿಲ್ಲಾ ಮುಖ್ಯರಸ್ತೆ, ತಾಲ್ಲೂಕು ಮುಖ್ಯರಸ್ತೆ, ಗ್ರಾಮದ ರಸ್ತೆ, ಇತರೆ ರಸ್ತೆ ಬದಿಯಲ್ಲಿ ಹಾಗೂ ಇತರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಫೈಬರ್ ಕೇಬಲ್, ಗ್ಯಾಸ್/ಪೆಟ್ರೋಲಿಯಮ್, ನಿಗಮ, ಜಲಮಂಡಳಿ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ, ಇತರೆ ಕುಡಿಯುವ ನೀರು, ಇತರೆ ಪೈಪ್ ಲೈನ್ ಹಾಕುವುದಕ್ಕಾಗಿ ವಿಧಿಸುವ ಶುಲ್ಕಗಳು ಈ ನಿಯಮದ ಅನುಸೂಚಿ-IV ರಲ್ಲಿರುವಂತೆ ಇರತಕ್ಕದ್ದು; **ಮತ್ತು**

(ಓ) **ಮನೋರಂಜನೆಗಳ ಮೇಲೆ ಶುಲ್ಕ.**- ಅಧಿನಿಯಮದ ಪ್ರಕರಣ199ರ ಉಪ-ಪ್ರಕರಣ (3)(ಎ)ರಡಿಯಲ್ಲಿ ಗ್ರಾಮ ಪಂಚಾಯತಿ ಪ್ರದೇಶ ಪರಿಮಿತಿಯಲ್ಲಿ ಮನೋರಂಜನೆ, ಇತರೆ ಉದ್ದೇಶಕ್ಕಾಗಿ ಕರ್ನಾಟಕ ಗ್ರಾಮ ಸ್ವರಾಜ್ **ಮತ್ತು** ಪಂಚಾಯತ್ ರಾಜ್ ಅಧಿನಿಯಮ 1993ರ ಅನುಸೂಚಿ-IV ರಲ್ಲಿ ಇರುವಂತೆ ಇರತಕ್ಕದ್ದು.

**25. ಕಾನೂನು ಬಾಹಿರ ಕಟ್ಟಡಗಳಲ್ಲಿನ ಅನುಮತಿ ಅಥವಾ ಲೈಸೆನ್ಸ್ ಅಥವಾ ಲೈಸೆನ್ಸ್ ನವೀಕರಣ.-** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನಿನಲ್ಲಿ, ಸ್ಥಳೀಯ ಸಂಸ್ಥೆಗಳ ಸ್ವತ್ತಿನಲ್ಲಿ, ಸರ್ಕಾರಿ ಸ್ವಾಮ್ಯದ ಶಾಸನಬದ್ಧ ಸಂಸ್ಥೆಗಳ ಸ್ವತ್ತಿನಲ್ಲಿ ಹೊರತುಪಡಿಸಿ:

(ಅ) ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿತವಾಗಿರುವ ಕಟ್ಟಡಗಳಲ್ಲಿ;

(ಆ) ಕೃಷಿ ಜಮೀನುಗಳಲ್ಲಿ ನಿರ್ಮಿತವಾಗಿರುವ ಕಟ್ಟಡಗಳಲ್ಲಿ;

(ಇ) ಕಟ್ಟಡಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲದೆ ಅನುಭವಿಸುತ್ತಿರುವ ಕಟ್ಟಡಗಳಲ್ಲಿ; **ಮತ್ತು**

(ಈ) ಕರ್ನಾಟಕ ಹೆದ್ದಾರಿಕಾಯ್ದೆ 1964ರ ಅಧಿನಿಯಮದ ಪ್ರಕಾರ ಗ್ರಾಮಗಳ ಪರಿಮಿತಿಯಲ್ಲಿ ರಸ್ತೆಗಳಗಡಿ ರೇಖೆ ಮತ್ತು ಕಟ್ಟಡ ರೇಖೆಗಳ ಅಂತರದೊಳಗಿನ ಕಟ್ಟಡಗಳಲ್ಲಿ;

**ಯಾವುದೇ** ವ್ಯಕ್ತಿಯು ವಾಣಿಜ್ಯ, ವ್ಯಾಪಾರ, ವಸತಿಯೇತರ ವ್ಯವಹಾರ ಮತ್ತು ಕೈಗಾರಿಕೆ ಪ್ರಾರಂಭಿಸಲು ಉದ್ದೇಶಿಸುವ ಹಾಗೂ ಈಗಾಗಲೇ ಪ್ರಾರಂಭಿಸಲಾಗಿರುವ ಯಾವುದೇ ಉಪಯೋಗ ಅಥವಾ ಅಧಿಭೋಗಕ್ಕಾಗಿ ಅನುಮತಿ ಅಥವಾ ಲೈಸನ್ಸ್ ಅಥವಾ ಲೈಸೆನ್ಸ್ ನವೀಕರಿಸಲು ಗ್ರಾಮ ಪಂಚಾಯಿತಿಯು ನಿರ್ದಿಷ್ಟಪಡಿಸಿದ ಶುಲ್ಕದ ಎರಡರಷ್ಟಕ್ಕೆ ಸಮನಾದ ಹೆಚ್ಚಿನ ಫೀಜನ್ನು ವಿಧಿಸತಕ್ಕದ್ದು. ಅಂಥ ಕಾನೂನು ಬಾಹಿರ ಚಟುವಟಿಕೆಗಳ ಸಂಬಂಧದಲ್ಲಿ

ಅವನ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಹೂಡುವುದಕ್ಕೆ ಪ್ರತಿಕೂಲವಾಗದಂತೆ, ಅಂತಹ ವ್ಯಕ್ತಿಯು ಪ್ರತಿ ವರ್ಷ ಅಂತಹ ಶುಲ್ಕವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

## ಅಧ್ಯಾಯ-VI

## ಸಂಕೀರ್ಣ

**26. ತೆರಿಗೆ ನಿರ್ಧರಣಾ ಪಟ್ಟಿಯ ಪರಿಷ್ಕರಣೆ.**- (1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 199(ಎ)ನೇ ಪ್ರಕರಣದ ಅಡಿಯಲ್ಲಿ ಎಲ್ಲಾ ವಿಧದ ತೆರಿಗೆಗಳನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಮತ್ತು ಎಲ್ಲಾ ವಿಧದ ದರಗಳು ಮತ್ತು ಶುಲ್ಕಗಳನ್ನು ಪ್ರತಿ ವರ್ಷ ಸರ್ಕಾರವು ನೀಡುವ ನಿರ್ದೇಶನಗಳಿಗೊಳಪಟ್ಟು ಕಡ್ಡಾಯವಾಗಿ ಪರಿಷ್ಕರಿಸತಕ್ಕದ್ದು.

**27. ತಾಲ್ಲೂಕು ಮಟ್ಟದಲ್ಲಿ ತೆರಿಗೆ, ದರ ಮತ್ತು ಪೀಜುಗಳ ಮೇಲ್ವಿಚಾರಣೆ.**- ಪ್ರತಿಯೊಂದು ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರು (ಪಂ.ರಾಜ್) ಮೇಲ್ವಿಚಾರಣೆ ಅಧಿಕಾರಿಯಾಗಿರತಕ್ಕದ್ದು.

**28. ಜಿಲ್ಲಾ ಮಟ್ಟದ ಸಮಿತಿ,**-ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ತೆರಿಗೆ ನಿರ್ಧರಣೆ ಹಾಗೂ ವಸೂಲಾತಿ ಮತ್ತು ಪರಿಷ್ಕರಣೆಯ ಬಗ್ಗೆ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡಲು ಈ ಕೆಳಕಂಡ ಸಮಿತಿ ಇರತಕ್ಕದ್ದು;

(1) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ- ಅಧ್ಯಕ್ಷರು

(2) ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ತಾಲ್ಲೂಕಿನ ಮುದ್ರಾಂಕ ಮತ್ತು ನೋಂದಣಿ ಇಲಾಖೆಯ ಉಪ ನೋಂದಣಾಧಿಕಾರಿ- ಸದಸ್ಯರು

(3) ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಅಧ್ಯಕ್ಷರು- ಸದಸ್ಯರು

(4) ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ- ಸದಸ್ಯರು

(5) ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ-ಸದಸ್ಯರು

(6) ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ)-ಸದಸ್ಯ ಕಾರ್ಯದರ್ಶಿ

**29. ತೆರಿಗೆ, ದರ ಮತ್ತು ಶುಲ್ಕಗಳ ವಸೂಲಾತಿ,**-(1) ಗ್ರಾಮ ಪಂಚಾಯಿತಿಯು ವಿಧಿಸಿದ ತೆರಿಗೆ, ದರ ಅಥವಾ ಶುಲ್ಕಗಳ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**30. ಸಂದಯಕ್ಕಾಗಿನ ರಸೀದಿ.**- ಈ ನಿಯಮಗಳ ಮೇರೆಗೆ ವಸೂಲಾಗುವ ಯಾವುದೇ ತೆರಿಗೆ, ದರ ಅಥವಾ ಫೀಜಿಗೆ ಸಂಬಂಧಿಸಿದಂತೆ ಸಂದಾಯಮಾಡಿದ ಮೊತ್ತಗಳಿಗಾಗಿ ಗ್ರಾಮ ಪಂಚಾಯಿತಿಯು ರಸೀತಿಯನ್ನು/ಇ-ರಸೀತಿಯನ್ನು ನೀಡತಕ್ಕದ್ದು.

**31. ದಂಡ ವಿಧಿಸುವುದು.**- ತೆರಿಗೆ ಮತ್ತು ದರವನ್ನು ಸಂದಾಯ ಮಾಡಲು ಬದ್ಧನಾದ ವ್ಯಕ್ತಿಯು, ಪ್ರತಿವರ್ಷ ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಪಾವತಿಸತಿದ್ದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಶೇಕಡ.5ರಷ್ಟು ದಂಡವನ್ನು ನೀಡತಕ್ಕದ್ದು.

**32. ಸ್ಥಿರ ಸ್ವತ್ತಿನ ಪರಿಶೀಲನೆ.**- **(1)** ಈ ಅಧಿನಿಯಮದ ಪ್ರಕರಣ 80ರ ಮೇರೆಗೆ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ಬೇಡಿಕೆ, ವಸೂಲಾತಿಯ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿ ಪ್ರದೇಶ ಪರಿಮಿತಿಯೊಳಗೆ ಇರುವ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸ್ಥಿರ ಸ್ವತ್ತಿನ

ಆವರಣದೊಳಗೆ, ಯುಕ್ತ ನೋಟೀಸನ್ನು ನೀಡಿದ ನಂತರ, ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ನಡುವಿನ ಅವಧಿಯೊಳಗೆ ಗ್ರಾಮ ಪಂಚಾಯಿತಿ ಅಧಿಕಾರಿ/ನೌಕರರು ಪ್ರವೇಶಿಸಲು, ಮಾಲೀಕರಿಂದ ಕಟ್ಟಡ ಮತ್ತು ಖಾಲಿ ಜಾಗದ ದಾಖಲೆಗಳನ್ನು ಪಡೆದು ಪರಿಶೀಲಿಸಲು ಅಧಿಕಾರ ಹೊಂದಿರತಕ್ಕದ್ದು.

(2) ಅಂಥ ಪ್ರವೇಶವನ್ನು ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸ್ಥಿರ ಸ್ವತ್ತಿನ ಮಾಲೀಕನು ನಿರ್ಬಂಧಿಸುವಂತಿಲ್ಲ. ಒಂದು ವೇಳೆ ಇಂತಹ ಪ್ರವೇಶವನ್ನು ನಿರ್ಬಂಧಿಸುವುದು ಕಂಡುಬಂದಲ್ಲಿ, ಅವನ ವಿರುದ್ಧ ಕಾನೂನು ಕ್ರಮ ಜರುಗಿಸತಕ್ಕದ್ದು.

**33. ತಗಾದೆ ನೋಟೀಸನ್ನು ಕೊಡುವುದು.–** 200ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ವಿಧಿಸಿದ ಹಾಗೂ ವಿಧಿಸಬಹುದಾದ ಯಾವುದೇ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಮೊಬಲಗು ಬಾಕಿಯಿರುವಾಗ, ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಮೊಬಲಗು, ಯಾವ ಅವಧಿಗಾಗಿ ಬಾಕಿ, ನಿಗಧಿಪಡಿಸಿದ ದಂಡ ಹಾಗೂ ಆಸ್ತಿಯ ವಿವರಗಳನ್ನು ಒಳಗೊಂಡಂತೆ, ಸಂದಾಯಕ್ಕೆ ಹೊಣೆಗಾರನಾಗಿರುವ ವ್ಯಕ್ತಿಗೆ ಹದಿನೈದು ದಿವಸಗಳೊಳಗೆ ಸಂದಾಯ ಮಾಡಲು ತಗಾದೆ ನೋಟೀಸ್‌ನ್ನು ಈ ನಿಯಮದ ನಮೂನೆ–3 ರಲ್ಲಿ ನೀಡತಕ್ಕದ್ದು.

**34. ತಗಾದೆ ಆದೇಶ.–** ಈ ನಿಯಮದ 37ರಲ್ಲಿ ಯಾವ ಮೊತ್ತಕ್ಕಾಗಿತಗಾದೆ ಬಿಲ್ಲನ್ನು ನೀಡಲಾಗಿದೆಯೋ ಅಂಥ ಮೊತ್ತವನ್ನು ಗ್ರಾಮ ಪಂಚಾಯಿತಿಗೆ ಹದಿನೈದು ದಿವಸಗಳೊಳಗೆ ಸಂದಾಯ ಮಾಡದಿದ್ದರೆ, ಅಂತಹ ಸುಸ್ತಿದಾರರಿಗೆ ಈ ಅಧಿನಿಯಮದ 200ನೇ ಪ್ರಕರಣ (2)ನೇ ಉಪ–ಪ್ರಕರಣದ ಅಡಿಯಲ್ಲಿ ಮುವತ್ತು ದಿವಸಗಳ ಒಳಗೆ ಬಾಕಿಯಿರುವ ಮೊತ್ತವನ್ನು ಗ್ರಾಮ ಪಂಚಾಯತಿ ಕಛೇರಿಗೆ ಸಂದಾಯ ಮಾಡಲು ತಗಾದೆ ಆದೇಶವನ್ನು ಈ ನಿಯಮದ ನಮೂನೆ–4ರಲ್ಲಿ ಜಾರಿ ಮಾಡತಕ್ಕದ್ದು.

**35. ಜಪ್ತಿ ಮತ್ತು ಮಾರಾಟ.–** (1)ಯಾವುದೇ ವ್ಯಕ್ತಿಯು ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ತಗಾದೆ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮುವತ್ತು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ಅಂತಹ ವ್ಯಕ್ತಿಯು ಏಕೆ ಸಂದಾಯ ಮಾಡಲಾಗುವುದಿಲ್ಲವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ, ಅವನು ಅಂತಹ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿರುವನೆಂದು ಭಾವಿಸತಕ್ಕದ್ದು ಮತ್ತು ತರುವಾಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಾರೆಂಟಿನ ಮೂಲಕ ತಪ್ಪಿತಸ್ಥನ ಚರಸ್ವತ್ತಿನ ಜಪ್ತಿ ಮಾರಾಟದ ಅಥವಾ ಸ್ಥಿರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಂತಹ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ವಸೂಲಿ ಮಾಡತಕ್ಕದ್ದು ಮತ್ತು ಪಂಚಾಯಿತಿ ನಿಧಿಗೆ ಜಮಾ ಮಾಡತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರೆಂಟನ್ನು ಈ ನಿಯಮದ ನಮೂನೆ–5ರಲ್ಲಿ ನೀಡತಕ್ಕದ್ದು. ಅಂತಹ ವಾರೆಂಟಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ದಿ ಅಧಿಕಾರಿಯು ಜಂಟಿಯಾಗಿ ಸಹಿ ಮಾಡತಕ್ಕದ್ದು.

(3) ಸ್ವತ್ತನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅಭಿಗ್ರಹಿಸುವುದು. ಅಂತಹ ಅಭಿಗ್ರಹಣದಲ್ಲಿ ನೌಕರರಾದ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸಂಬಂಧಿಸಿದ ಕರ ವಸೂಲಿಗಾರರು ಸಹಕರಿಸತಕ್ಕದ್ದು.

(4) ವಾರೆಂಟಿನಲ್ಲಿ ನಿರ್ದೇಶಿಸಿದ ಜಪ್ತಿ ಕಾರ್ಯಾಚರಣೆಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ನಡುವಿನ ಅವಧಿಯೊಳಗೆ ನಡೆಸತಕ್ಕದ್ದು.

(5) ಜಪ್ತಿ ಮಾಡುವುದಕ್ಕೆ ಮುಂಚೆ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಲು ತಿಳಿಸತಕ್ಕದ್ದು. ಅದನ್ನು ಸಂದಾಯ ಮಾಡದಿದ್ದರೆ ಅವಶ್ಯವೆಂದು ಯೋಚಿಸುವಂಥ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗಿನ ಮೌಲ್ಯಕ್ಕೆ ಸಮನಾಗಿರುವಂತೆ ಸ್ವತ್ತನ್ನು ಅಭಿಗ್ರಹಿಸತಕ್ಕದ್ದು.

(6) ಅಭಿಗ್ರಹಿಸಿದ ಸ್ವತ್ತಿನ ವಿವರಣಾ ಪಟ್ಟಿಯನ್ನು ತಯಾರಿಸುವುದು. ಸ್ವತ್ತಿನ ಸ್ವಾಧೀನದಲ್ಲಿನ ವ್ಯಕ್ತಿಗೆ ಅಭಿಗ್ರಹಿಸಿದ ಸ್ವತ್ತಿನ ವಿವರಣಾ ಪಟ್ಟಿಯನ್ನು ಮತ್ತು ಮಾರಾಟದ ನೋಟೀಸನ್ನು ನಮೂನೆ-6 ರಲ್ಲಿ ನೀಡುವುದು. ಬಾಕಿಯಾದ ಮೊಬಲಗನ್ನು ಸಂದಾಯ ಮಾಡಲು ಮತ್ತು ಅಭಿಗ್ರಹಿಸಿದ ಸ್ವತ್ತುಗಳನ್ನು ವಾಪಸ್ಸು ಪಡೆಯಲು ಏಳು ದಿವಸಗಳ ಅವಧಿಯನ್ನು ನೀಡತಕ್ಕದ್ದು.

(7) ಅಭಿಗ್ರಹಿಸಿದ ಸ್ವತ್ತನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು, ಮಾರಾಟ ಮಾಡುವುದು ಅವಶ್ಯಕವೆಂದು ತೀರ್ಮಾನಿಸಿದಾಗ ಸಂಪೂರ್ಣ ವಿವರಗಳೊಂದಿಗೆ ಮಾರಾಟದ ಕಾಲ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ, ಉದ್ದೇಶಿತ ಮಾರಾಟದ ಬಗ್ಗೆ ಗ್ರಾಮ ಪಂಚಾಯಿತಿಯ ಸೂಚನಾ ಫಲಕದಲ್ಲಿ, ಗ್ರಾಮ ಪಂಚಾಯಿತಿ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಗ್ರಾಮ ಪಂಚಾಯಿತಿ ಪ್ರದೇಶದಲ್ಲಿನ ಇತರ ಪ್ರಮುಖ ಸ್ಥಳಗಳಲ್ಲಿ ಪ್ರಕಟಿಸತಕ್ಕದ್ದು.

(8) ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಕನಿಷ್ಠ ಮುವತ್ತು ದಿವಸಗಳ ಅವಧಿಯು ಮುಕ್ತಾಯದ ಮುಂಚೆ ಯಾವುದೇ ಕಾಲದಲ್ಲಿ ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ, ಬಹಿರಂಗ ಹರಾಜಿನ ಮೂಲಕ ಅಭಿಗ್ರಹಿಸಿದ ಸ್ವತ್ತಿನ ಮಾರಾಟವನ್ನು ಮಾಡತಕ್ಕದ್ದು.

(9) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅಭಿಗ್ರಹಿಸಿದ ಸ್ವತ್ತಿನ ಹರಾಜನ್ನು ಕೊನೆಗೊಳಿಸುವ ಮುಂಚೆ, ಯಾವುದೇ ಕಾಲದಲ್ಲಿ ತಪ್ಪಿತಸ್ಥನು ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಯು, ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ಸಂದಾಯ ಮಾಡಿದರೆ, ಮಾರಾಟ ಪ್ರಕ್ರಿಯೆಯನ್ನು ರದ್ದುಗೊಳಿಸುವುದು. ಹಾಗೂ ಅಭಿಗ್ರಹಿಸಿದ ಸ್ವತ್ತನ್ನು ಹಿಂದಿರುಗಿಸತಕ್ಕದ್ದು.

**36. ಬಾಕಿದಾರನ ಪ್ರಾಸಿಕ್ಯೂಷನ್,-** (1)ಯಾವುದೇ ಕಾರಣಕ್ಕಾಗಿ ಬಾಕಿದಾರನ ಸ್ವತ್ತಿನಜಪ್ತಿ ಅಥವಾ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗಿನ ಮೌಲ್ಯಕ್ಕೆ ಸಮನಾಗಿರುವಂತೆ ಜಪ್ತಿ ಮಾಡುವುದು ಕಾರ್ಯಸಾಧ್ಯವಿಲ್ಲದಿದ್ದರೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಮ್ಯಾಜಿಸ್ಟ್ರೇಟನ ಮುಂದೆ ಬಾಕಿದಾರನನ್ನು ಪ್ರಾಸಿಕ್ಯೂಟ್ ಮಾಡತಕ್ಕದ್ದು.

(2) (1) ನೇ ಉಪ-ನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯು ಬಾಕಿ ಮೊಬಲಗನ್ನು ಸಂದಾಯ ಮಾಡಲು ಉದ್ದೇಶಪೂರ್ವಕವಾಗಿ ತಪ್ಪಿರುವನೆಂದು ಅಥವಾ ಜಪ್ತಿ ಅಥವಾ ಸಾಕಷ್ಟು ಜಪ್ತಿಯನ್ನು ಉದ್ದೇಶಪೂರ್ವಕವಾಗಿ ತಡೆದಿದ್ದಾನೆಂದು ಮ್ಯಾಜಿಸ್ಟ್ರೇಟರಿಗೆ

ಮನದಟ್ಟಾಗುವಂತೆ ರುಜುವಾತುಪಡಿಸಿದ ಮೇಲೆ ರೂ.25,000/- ಜುಲ್ಮಾನೆಯನ್ನು ವಿಧಿಸತಕ್ಕದ್ದು.

(3) (2) ನೇ ಉಪ-ನಿಯಮದ ಮೇರೆಗಿನ ಅಪರಾಧಕ್ಕಾಗಿ ಯಾವನೇ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ ಮ್ಯಾಜಿಸ್ಟ್ರೇಟರು ವಿಧಿಸಬಹುದಾದಂಥ ಜುಲ್ಮಾನೆಯೊಂದಿಗೆ ತೆರಿಗೆ, ದರ ಅಥವಾ ಫೀಜಿನ ಬಾಬ್ತಿನ ಬಾಕಿ ಮೊಬಲಗನ್ನು ಕ್ಷಿಪ್ರವಾಗಿ ವಸೂಲು ಮಾಡತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಗೆ ಸಂದಾಯ ಮಾಡತಕ್ಕದ್ದು.

**37. ಅಪೀಲು,-** ಈ ಅಧಿನಿಯಮದ 199, 201 ಹಾಗೂ 202ನೇ ಪ್ರಕರಣದಡಿಯಲ್ಲಿ ಯಾವುದೇ ತೆರಿಗೆ, ದರ ಅಥವಾ ಫೀಜುಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗೆ ಮೇಲ್ಮನವಿ ಸಲ್ಲಿಸತಕ್ಕದ್ದು. ಮೇಲ್ಮನವಿ ಸಲ್ಲಿಸುವ ಮುನ್ನ ಅಂತಹ ಬಾಧಿತ ವ್ಯಕ್ತಿಯು ದರ ಅಥವಾ ಫೀಜುಗಳ ಶೇಕಡಾ 50ರಷ್ಟನ್ನು ಮೊಬಲಗನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ತೇವಣಿ ಇಡತಕ್ಕದ್ದು, ಈ ರೀತಿ ಭಾಧಿತ ವ್ಯಕ್ತಿಯು ತೆರಿಗೆಯ ಶೇಕಡಾ 50ರಷ್ಟನ್ನು ಗ್ರಾಮ ಪಂಚಾಯಿತಿಗೆ ತೇವಣಿಇಟ್ಟ ನಂತರವೇ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮೇಲ್ಮನವಿಯನ್ನು ಸ್ವೀಕರಿಸತ್ಕದ್ದು. ಸದರಿ ಪ್ರಕರಣವನ್ನು ಗ್ರಾಮ ಪಂಚಾಯಿತಿ ಮತ್ತು ಸಂಬಂಧಪಟ್ಟ ಬಾಧಿತ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯು ಮೇಲ್ಮನವಿ ಸ್ವೀಕರಿಸಿದ ಒಂದು ತಿಂಗಳೊಳಗಾಗಿ ಪ್ರಕರಣವನ್ನು ಇತ್ಯರ್ಥಪಡಿಸತಕ್ಕದ್ದು. ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಅಂತಹ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**38. ನಿರಸನ ಮತ್ತು ಉಳಿಸುವಿಕೆಗಳು:-** (1) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994 ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**ಪರಂತು ಸದರಿ ನಿರಸನವು,-**

(ಎ) ಸದರಿ ನಿಯಮಗಳನ್ನು ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಾಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಬಾಧೆ ಉಂಟು ಮಾಡತಕ್ಕದ್ದಲ್ಲ, ಅಥವಾ

(ಬಿ) ಸದರಿ ನಿಯಮಗಳಡಿಯಲ್ಲಿ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾದ್ಯತೆಗೆ ಬಾದೆಯನ್ನು ಉಂಟು ಮಾಡತಕ್ಕದ್ದಲ್ಲ.

(ಸಿ) ಉಪ ನಿಯಮ (1) ರ ಮೂಲಕ ನಿರಸನಗಳಸಿದ ಸದರಿ ನಿಯಮಗಳಿಗೆ ಯಾವುದೇ ನಿಯಮಗಳಲ್ಲಿ ಅಥವಾ ಆದೇಶದಲ್ಲಿ ಮಾಡಿದ ಉಲ್ಲೇಖವನ್ನು ಈ ನಿಯಮಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**ನಮೂನೆ-1**

**(ನಿಯಮ-4ರ ಉಪ ನಿಯಮ (3) ನ್ನು ನೋಡುವುದು)**

ಅರ್ಜಿದಾರನ ಭಾವಚಿತ್ರ

**ನಿರಾಕ್ಷೇಪಣಾ ಪತ್ರ ಅರ್ಜಿ**

**(ದ್ವಿಪ್ರತಿಯಲ್ಲಿ)**

| ಕ್ರ.ಸಂ. | ವಿವರಗಳು | | | |
|---|---|---|---|---|
| 01 | ಅರ್ಜಿದಾರನ/ಳ ಹೆಸರು | | | |
| | ಗಂಡ/ಪೋಷಕರ ಹೆಸರು | | | |
| | ಖಾಯಂ ವಿಳಾಸ | | | |
| | ಸಂಪರ್ಕಿಸಬೇಕಾದ ವಿಳಾಸ | | | |
| | ಮೊಬೈಲ್‌ದೂರವಾಣಿ ಸಂಖ್ಯೆ | | | |
| 02 | ಆಸ್ತಿ ಗುರುತಿನ ಸಂಖ್ಯೆ/ ಗ್ರಾಮ/ ಗ್ರಾಮ ಪಂಚಾಯಿತಿ/ ತಾಲ್ಲೂಕು | | | |
| **03** | **ನಿರಾಕ್ಷೇಪಣಾ ಪತ್ರದ ಉದ್ದೇಶ** | ವಿದ್ಯುತ್ ಸಂಪರ್ಕ ಪಡೆಯುವ ಉದ್ದೇಶಕ್ಕಾಗಿ, ಭೂ ಪರಿವರ್ತನೆಯ ಉದ್ದೇಶಕ್ಕಾಗಿ, ಕಲ್ಲು ಪುಡಿ ಮಾಡುವ(ಕ್ರಷರ್) ಪರವಾನಿಗೆ ಪಡೆಯುವ ಉದ್ದೇಶಕ್ಕಾಗಿ, ಇತರೆ ಉದ್ದೇಶಕ್ಕಾಗಿ(ಉದ್ದೇಶವನ್ನು ನಮೂದಿಸುವುದು) | | |
| **04** | **ಸ್ವತ್ತಿನ ವರ್ಗೀಕರಣ** | ಗ್ರಾಮಠಾಣ ಆಸ್ತಿ, ಅನುಮೋದಿತ ಬಡಾವಣೆಯ ಆಸ್ತಿ, ಸರ್ಕಾರದ ವಸತಿ ಯೋಜನೆಯ ಆಸ್ತಿ, ಭೂಪರಿವರ್ತಿತ ಜಮೀನಿನ ಆಸ್ತಿ, ಕೃಷಿ ಭೂಮಿಯಲ್ಲಿನ ಆಸ್ತಿ | | |
| **05** | **ಕಟ್ಟಡ ಸ್ವರೂಪ** | ಆರ್.ಸಿ.ಸಿ. ಛಾವಣಿ, ಕಾಂಕ್ರೀಟ್/ಇಟ್ಟಿಗೆ ಗೋಡೆ, ಮಾರ್ಬಲ್ ನೆಲಹಾಸು, ಗ್ರಾನೈಟ್ ನೆಲಹಾಸು, ವಿಟ್ರಿಫೈಡ್ ನೆಲಹಾಸು,ಮೊಸಾಯಿಕ್/ಕಡಪ/ಕಾಂಕ್ರೀಟ್ ನೆಲಹಾಸು, ಮಂಗಳೂರು ಹೆಂಚು/ಎ.ಸಿ. ಶೀಟ್, ಇಟ್ಟಿಗೆ ಗೋಡೆ, ರೆಡಾಕ್ಸೈಡ್ ನೆಲಹಾಸು, ಕರಿ ಹೆಂಚು, ಮಣ್ಣಿನ/ಇಟ್ಟಿಗೆ ಗೋಡೆ, ರೆಡಾಕ್ಸೈಡ್ ನೆಲಹಾಸು | | |
| **06** | **ಒಟ್ಟು ನಿವೇಶನ/ಜಮೀನಿನ ವಿಸ್ತೀರ್ಣ** | ಉದ್ದ: ಚ.ಮೀ. | ಅಗಲ: ಚ.ಮೀ. | ಒಟ್ಟು: ಚ.ಮೀ. |
| **07** | **ಕಟ್ಟಡದ ವಿಸ್ತೀರ್ಣ** | ಉದ್ದ: ಚ.ಮೀ. | ಅಗಲ: ಚ.ಮೀ. | ಒಟ್ಟು: ಚ.ಮೀ. |
| **08** | **ಚೆಕ್ಕುಬಂದಿ** | ಪೂರ್ವ: | ಪಶ್ಚಿಮ: | |
| | | ಉತ್ತರ: | ದಕ್ಷಿಣ: | |
| **09** | **ದಾಖಲೆಗಳು** | ವಿದ್ಯುತ ಸರಬರಾಜು ಕಂಪನಿಗಳಿಂದ ಪಡೆದ ಅಂದಾಜು ಪತ್ರಿಕೆ | | |
| | | ಇ-ಸ್ವತ್ತು ನಮೂನೆ | | |
| | | ಆಸ್ತಿ ತೆರಿಗೆ ಪಾವತಿ ರಶೀದಿ | | |
| | | ಪಹಣಿ ಪತ್ರಿಕೆ | | |
| | | ಇತರೆ ಅನ್ವಯಿಸುವ ದಾಖಲಾತಿಗಳು | | |
| **ಅರ್ಜಿದಾರನ/ಳ ಸ್ವಯಂ ಘೋಷಣಾ ಪ್ರಮಾಣ ಪತ್ರ** | | | | |
| 1. | ನಾನು/ನಾವು ಅನುಮತಿಗಾಗಿ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ನನ್ನಿಂದ ಒದಗಿಸಲಾಗಿರುವ ಮಾಹಿತಿಯು ನನ್ನಜ್ಞಾನಕ್ಕೆ ತಕ್ಕಂತೆ ಸತ್ಯವಾಗಿರುತ್ತದೆ ಮತ್ತು ಸರಿಯಾಗಿರುತ್ತದೆಎಂದು ಈ ಮೂಲಕ ದೃಢೀಕರಿಸುತ್ತೇನೆ/ವೆ. | | | |
| 2. | ನಾನು/ನಾವು ಪರವಾನಗಿಯಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಕ್ಕಾಗಿ ಹೊರತುಪಡಿಸಿ, ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿ ಇತರೆ ಉದ್ದೇಶಗಳನ್ನು ಕೈಗೊಳ್ಳುವುದಿಲ್ಲವೆಂದು ಘೋಷಿಸುತ್ತೇನೆ/ವೆ. | | | |
| 3. | ನಾನು/ನಾವು ಮೇಲಿನ ನಿಯಮಗಳು ಮತ್ತು ಷರತ್ತುಗಳನ್ನು ಒಪ್ಪಿರುತ್ತೇನೆ/ವೆ. | | | |

ಸ್ಥಳ:

ದಿನಾಂಕ:

ಅರ್ಜಿದಾರನ/ಳ ಸಹಿ

ಅನುಬಂಧ-2


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೨ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೮೬<br>No.586 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 54 SHASANA 2025, BENGALURU, DATED:12.09.2025**

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 63 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ-IVA) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 63**

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011ರ (2011ರ ಕರ್ನಾಟಕದ ಅಧಿನಿಯಮ 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು .

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011 (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (ಎ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಇವರು ಅಧ್ಯಕ್ಷರಾಗಿರತಕ್ಕದ್ದು."

(ii) ಖಂಡ (ಬಿ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು."

(iii) ಖಂಡ (ಎಫ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ."

(iv) ಖಂಡ (ಎಚ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ದಕ್ಷಿಣ ವಲಯ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ."

**3. ಪ್ರಕರಣ 11ರ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**11. ಅಧಿಸೂಚಿತ ಮತ್ತು ಅಧಿಸೂಚಿತವಲ್ಲದ ಪ್ರದೇಶದಲ್ಲಿ ಅಂತರ್ಜಲವನ್ನು ತೆಗೆಯಲು ಮತ್ತು ಬಳಸಲು ಅನುಮತಿ ನೀಡಿಕೆ.-**"

(ii) ಉಪಪ್ರಕರಣ (1)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕುಡಿಯುವ ನೀರಿನ ಸಾರ್ವಜನಿಕ ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, (1ಎ) ಉಪಪ್ರಕರಣದಡಿ ವಿನಾಯಿತಿ ಪಡೆದವರನ್ನು ಹೊರತುಪಡಿಸಿ, ಯಾರೇ ಅಂತರ್ಜಲ ಬಳಕೆದಾರನು, ಪ್ರಾಧಿಕಾರದಿಂದ ಅನುಮತಿ ಪಡೆಯದ ಹೊರತು ಅಥವಾ ಅಥವಾ ನಿರಾಪೇಕ್ಷಣಾ ಪತ್ರವನ್ನು ಸ್ವೀಕರಿಸಿದ ಹೊರತು ಅಧಿಸೂಚಿತ ಅಥವಾ ಅಧಿಸೂಚಿತವಲ್ಲದ ಪ್ರದೇಶದಲ್ಲಿ ಯಾವುದೇ ಉದ್ದೇಶಕ್ಕಾಗಿ ಬಾವಿಯನ್ನು ಕೊರೆಯತಕ್ಕದ್ದಲ್ಲ ಅಥವಾ ತೋಡತಕ್ಕದ್ದಲ್ಲ.

**(1ಎ) ಅನುಮತಿ ಅಥವಾ ನಿರಾಪೇಕ್ಷಣಾ ಪತ್ರ ಪಡೆಯುವದರಿಂದ ವಿನಾಯತಿ ಪಡೆಯಲಾದ ಗ್ರಾಹಕರ ಪ್ರವರ್ಗಗಳು.-** ಹೊಸ ಕೊಳವೆ ಬಾವಿಯನ್ನು ಕೊರೆಯಲು ಅನುಮತಿ ಪಡೆಯುವುದು ಮತ್ತು ಅಂತರ್ಜಲ ತೆಗೆಯಲು ನಿರಾಪೇಕ್ಷಣಾ ಪತ್ರ ಕೋರುವುದರಿಂದ ವಿನಾಯಿತಿಸತಕ್ಕ ಪ್ರವರ್ಗಗಳು ಈ ಮುಂದಿನಂತಿವೆ, ಎಂದರೆ:-

(i) ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವಯಕ್ತಿಕ ಗೃಹಪಯೋಗಿ ಗ್ರಾಹಕರು;

(ii) ಗ್ರಾಮೀಣ ಕುಡಿಯುವ ನೀರು ಸರಬರಾಜು ಸ್ಕೀಮುಗಳು;

(iii) ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿನ ಸಶಸ್ತ್ರ ಪಡೆಯ ಕಾರ್ಯಸಂಸ್ಥೆಗಳು ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ದಳಗಳ ಕಾರ್ಯಸಂಸ್ಥೆಗಳು;

(iv) ಕೃಷಿ ಚಟುವಟಿಕೆಗಳು;

(v) ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಕೆಗಳು ಅಥವಾ ಗಣಿಗಾರಿಕೆ ಪ್ರಾಜೆಕ್ಟ್‌ಗಳು ಅಥವಾ ಮೂಲಸೌಕರ್ಯ ಪ್ರಾಜೆಕ್ಟ್‌ಗಳ ಎಲ್ಲಾ ನಿರ್ಧರಿಸಿದ ಘಟಕಗಳಿಗೆ ಕೇವಲ ಕುಡಿಯುವ ಅಥವಾ ಗೃಹ ಬಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿನಕ್ಕೆ 5ಘನ ಮೀಟರ್ ವರೆಗೆ; ಮತ್ತು

(vi) ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳು,-

(ಎ) ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು; ಮತ್ತು

(ಬಿ) ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳು.

(1ಬಿ) ಅಂತರ್ಜಲವನ್ನು ಹೊರತೆಗೆಯುವ ಮತ್ತು ಅದನ್ನು ದೊಡ್ಡ ಪ್ರಮಾಣದಲ್ಲಿ ನೀರು ಸರಬರಾಜುದಾರರಾಗಿ ಸರಬರಾಜು ಮಾಡುವ ಎಲ್ಲಾ ಖಾಸಗಿ ಟ್ಯಾಂಕರ್‌ಗಳು, ಸರ್ಕಾರವು ಅಧಿಸೂಚಿಸಬಹುದಾದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅಂತರ್ಜಲ ಹೊರತೆಗೆಯುದಕ್ಕಾಗಿ ನಿರಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು."

**4. ಪ್ರಕರಣ 17ರ ತಿದ್ದುಪಡಿ**.- ಮೂಲ ಅಧಿನಿಯಮದ 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ಅಂತರ್ಜಲ ಹೊರತೆಗೆಯುವುದನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಹೊರಡಿಸತಕ್ಕದ್ದು, ಅಳವಡಿಸಿಕೊಳ್ಳತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು;

(ಜೆ-2) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಯಾವುದೇ ಪ್ರದೇಶಕ್ಕಾಗಿ ಜಿಲ್ಲಾ ಸಮಿತಿ ಅಥವಾ ಯಾವುದೇ ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(ಜೆ-3) ಅಂತರ್ಜಲದ ಸಮರ್ಪಕ ನಿಯಂತ್ರಣ ಮತ್ತು ಬಳಕೆ ಅಥವಾ ಯಾವುದೇ ಇತರ ವಿಷಯಗಳಲ್ಲಿ ಅವರುಗಳ ಪೈಕಿ ಅಥವಾ ಹೊರಗಿನವರಿಂದ ಪ್ರಾಧಿಕಾರಕ್ಕೆ ಸಲಹೆ ನೀಡಲು ಅಥವಾ ಸಮಾಲೋಚಿಸಲು ಒಂದು ಅಥವಾ ಹೆಚ್ಚಿನ ಸದಸ್ಯರು, ತಜ್ಞರನ್ನು ಹೊಂದಿರುವ ಉಪ-ಸಮಿತಿಯನ್ನು ರಚಿಸತಕ್ಕದ್ದು."

**5. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ವಾಣಿಜ್ಯ, ಕೈಗಾರಿಕೆ, ಗಣಿಗಾರಿಕೆ ಯೋಜನೆಗಳು, ಮೂಲಸೌಕರ್ಯ ಯೋಜನೆಗಳು ಮತ್ತು ಸರ್ಕಾರವು ಅಧಿಸೂಚಿಸಿದಂತೆ ದೊಡ್ಡಪ್ರಮಾಣದ ನೀರು ಸರಬರಾಜಿನ ಬಳಕೆಗಾಗಿ ಹೊರತೆಗೆಯುವ ಅಂತರ್ಜಲದ ಪ್ರಮಾಣದ ಮೇರೆಗೆ ಪ್ರಾಧಿಕಾರವು ಸೂಕ್ತ ದರಗಳನ್ನು ವಿಧಿಸಬಹುದು."

**6. ಪ್ರಕರಣ 32ರ ತಿದ್ದುಪಡಿ.-** ಮೂಲ ಅಧಿನಿಯಮದ 32ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರ (ಬಿ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಈ ಅಧಿನಿಯಮದ 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಒದಗಿಸಲು ಅಗತ್ಯಪಡಿಸಲಾಗಿದ್ದು,-

(i) ಅಂಥ ಮಾಹಿತಿ ಅಥವಾ ವಿವರಪತ್ರವನ್ನು ಒದಗಿಸಲು ಉದ್ದೇಶ ಪೂರ್ವಕವಾಗಿ ನಿರಾಕರಿಸಿದರೆ ಅಥವಾ ಕಾನೂನು ಬದ್ಧ ಕಾರಣವಿಲ್ಲದೇ ಉಪೇಕ್ಷಿಸಿದರೆ ; ಅಥವಾ

(ii) ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಅದು ಸುಳ್ಳು ಎಂಬುದಾಗಿ ತಿಳಿದೂ ಉದ್ದೇಶ ಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ ;

- ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತನಾಗತಕ್ಕದ್ದು. ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮತ್ತು ತರುವಾಯದ ವಿಫಲತೆ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಪ್ರತಿದಿನಕ್ಕೆ ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ದಂಡವನ್ನು ವಿಧಿಸತಕ್ಕದ್ದು.

(ii) ಉಪಪ್ರಕರಣ (2)ರಲ್ಲಿರುವ "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಉಪಪ್ರಕರಣ (4)ರಲ್ಲಿರುವ "ಹತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iv) ಉಪಪ್ರಕರಣ (4)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಸಿಂಧುವಾದ ನಿರಾಪೇಕ್ಷಣಾ ಪತ್ರವನ್ನು ಪಡೆಯದ ಹೊರತು ನೀರನ್ನು ತೆಗೆಯುವ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಸದರಿ ನಿರಾಕ್ಷೇಪಣಾ ಪತ್ರವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ ಸೂಕ್ತ ಮಾರ್ಪಾಡುಗಳೊಂದಿಗೆ ಸರ್ಕಾರವು ಅಧಿಸೂಚಿಸಿದಂಥ ದಂಡನೆಗಳೊಂದಿಗೆ ದಂಡಿತನಾಗತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಅನುಬಂಧ - 3

CPMG / KA / BG-GPO / 13 / 2003-05

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ - IV-A | ಬೆಂಗಳೂರು, ಗುರುವಾರ, ಡಿಸೆಂಬರ್ ೧೧, ೨೦೦೩ (ಮಾರ್ಗಶಿರ ೨೦, ಶಕ ವರ್ಷ ೧೯೨೫) | ನಂ. ೧೫೧೫ |
|---|---|---|

**Parliamentary Affairs and Legislation Secretariat**

**Notification**

**No. SAMVYASHAE 77 SHASANA 2003, Bangalore, dated 11th December, 2003**

Ordered that the translation of the ಕರ್ನಾಟಕ ಅಂತರಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ 1999, in the English language, be published as authorised by the Governor of Karnataka under clause (3) of Article 348 of the constitution of India in the Karnataka Gazette for general information.

The following translation of the, ಕರ್ನಾಟಕ ಅಂತರಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ 1999, in the English language, published in the Official Gazette under the authority of the Governor of Karnataka under clause (3) of Article 348 of the Constitution of India.

**KARNATAKA ACT NO 44 OF 2003**

(First Published in the Karnataka Gazette Extra-ordinary on the Twenty seventh day of October, 2003)

**THE KARNATAKA GROUND WATER (REGULATION FOR PROTECTION OF SOURCES OF DRINKING WATER) ACT, 1999**

(Received the assent of the President on the Seventeenth day of October, 2003)

An Act to regulate the exploitation of ground water for the protection of public sources of drinking water and matters connected therewith and incidental thereto.

Whereas it is expedient to regulate the exploitation of ground water for the protection of public sources of drinking water and to provide for matters connected therewith and incidental thereto.

Be it enacted by the Karnataka State Legislature in the fiftieth year of the Republic of India as follows.

## CHAPTER - I

### Preliminary

1. **Short title extent and commencement.-** (1) This Act may be called the Karnataka Ground Water (Regulation for Protection of Sources of Drinking Water) Act, 1999.

(2) It extends to the whole of the State of Karnataka.

(3) It shall come into force on such date as the State Government may, by notification appoint and different dates may be appointed for different local areas or different provisions of this Act.

2. **Definitions.-** In this Act unless the context otherwise requires.-

(1) "appropriate authority" means the Deputy Commissioner and includes any officer, not below the rank of an Assistant Commissioner as the Government may by notification appoint for the purposes of this Act, and different officers may be appointed for different local areas of the State.

(2) "drinking water purpose" means consumption or use of water by human population for drinking and for other domestic purposes; and includes consumption of water for similar such relevant purposes for live stock.

**Explanation.**- For the purpose of this clause, the expression ' domestic purposes" shall include consumption or use of water for cooking ,bathing, washing, cleansing and other day-to-day activities.

(3) "Government " means the State Government.

(4) "Ground water" means water existing in an aquifer below the surface of the ground at any particular location regardless of the geological structure in which it is stationary or moving and includes all ground water reservoirs.

(5) "Local Authority" means and includes a Municipal Corporation, Municipal Council, Zilla Panchayat, Taluk Panchayat, Grama Panchayat, Town Panchayat, Industrial Township, Improvement Board, Urban Development Authority and Planning Authority, Bangalore Water Supply and Sewerage Board, Karnataka Urban Water Supply and Drainage Board constituted under any law for the time being in force;

(6) "Over exploited Water Shed" means a water shed where the estimated annual ground water extraction is more than eighty five percent of the estimated average annual ground water recharge, calculated in the prescribed manner, and declared as such under section 6;

(7) "Public source of drinking water " means a well from which the Government or a local authority or such authority as the Government may, by notification specify, provides water to the public and includes such point or any other drinking water sources as may be notified by appropriate Authority;

(8) "public water supply systems' means the structures relating to a public drinking water source, including conveying pipelines, storage reservoir, stand posts, hand pump, power pump and all other materials connected thereto, through which water is supplied for drinking water purpose:

(9) "requisite quantity of water" means the quantity of water calculated on the basis of per capita supply to be fixed by the Government from time to time;

(10) "Sink" with all its grammatical variations and cognate expressions, in relation to a well, includes any drilling, boring or digging of a new well or deepening carried out to an existing well;

(11) "Technical officer" means an officer of the Department of Mines and Geology, Government of Karnataka not below the rank of a Geologist;

(12) "Water scarcity area" means an area declared as such under section 4;

(13) "Watershed" means an area confined within the topographic water divide line as identified and notified by the Ground water Survey, Division of the Department of Mines and Geology, Government of Karnataka from time to time having regard to the purposes of this Act;

(14) "Well" means a well sunk for the search or extraction of ground water by a person or persons except by the authorised officials of the State or Central Governments for carrying out scientific investigations, exploration, development, augmentation, conservation, protection, or management works and shall include open well, dug well, borewell, dug-cum-borewell, tubewell, filter points, collector well and infiltration gallery or any of their combinations or variations;

## CHAPTER - II

## PROTECTION MEASURES FOR PUBLIC SOURCES OF DRINKING WATER

**3. Permission to sink well etc.**- (1) No person shall without obtaining permission from the appropriate authority under sub-section (3), sink any well for purpose of extracting or drawing water within five hundred metres of public source of drinking water;

Provided that nothing in this sub-section shall apply to sinking of a well on behalf of the Government or a local authority for being used as a public drinking water source.

(2) Any person desirous of obtaining permission under this section shall make an application to the appropriate authority in such form and accompanied by such fees as may be prescribed.

(3) On receipt of an application under sub-section (2), the appropriate authority may, on the advice of the Technical Officer, and having regard to the interest of the general public to have the supply of requisite quantity of water for the purpose of drinking water from the public sources: and for reasons to be recorded in writing grant permission for sinking of well or reject the application.

(4) Every permission granted under sub-section (3) shall be subject to,-

(a) the condition that the appropriate authority may, for reasons to be recorded in writing by order prohibit, restrict or regulate from time to time the extraction of water from such well, if in its opinion it is necessary to do so in the interest of protection of public sources of drinking water.

(b) such other conditions and restrictions as may be prescribed.

4. **Declaration of water Scarcity area.-** If, at any time during the course of monsoon or thereafter, the appropriate authority on the advice of the Technical Officer and having regard to the quantum and pattern of rainfall and any other relevant factor, is of the opinion that the public sources of drinking water in any area within its jurisdiction are likely to be adversely affected, it may, by order declare such area to be a water scarcity area for such period as may be specified in the order, but not exceeding one year at a time.

5. **Regulation of extraction of water from wells in water scarcity area.-** (1) Upon declaration of any area as water scarcity area under section 4, the appropriate authority may for the duration of the period of water scarcity, by order, regulate the extraction of water from any well in such area by restricting or prohibiting such extraction for any purpose where such well is within a distance of five hundred meters of the public source of drinking water:

(2) The order imposing such restriction or prohibition under sub-section (1) shall be served or caused to be served personally by delivering or tendering the same to the owner of the well at least fifteen days before the commencement of the order of restriction or prohibition, as the case may be. Where the owner cannot be found, an authentic copy of the order may be served on any adult member of the family. In the case of an order affecting a corporation or a firm, it shall be served in the manner for the service of a summon under rule 2 of order XXIX or rule 3 of order XXX, as the case may be, in the First Schedule to the Code of Civil Procedure, 1908.

6. **Declaration of over-exploited watershed.-** (1) The appropriate authority may, on the advice of the Technical Officer, declare a watershed as over exploited water shed.

(2) If at any time, the appropriate authority, on the advise of technical officer is satisfied that the availability of ground water has improved in an over exploited water shed it may by notification cancel the declaration made under sub-section (1).

7. **Prohibition for sinking wells in over-exploited watershed.-** (1) No person shall, without obtaining permission of the appropriate authority under sub-section (3) sink well for any purpose within the area of an over-exploited water shed:

Provided that nothing in this sub-section shall apply to sinking of a well on behalf of the Government or a local authority for being used as a public source of drinking water.

(2) Every application for permission under this section shall be made to the appropriate authority in such form and accompanied by such fees as may be prescribed.

(3) The appropriate authority may, on receipt of the application and having regard to the requirement of water for purposes of providing drinking water and in the interest of general public either grant permission to sink well or reject the application.

(4) Every permission granted under this section shall be subject to,-

(a) the condition that the appropriate authority may, for reasons to be recorded in writing, by order prohibit, restrict or regulate the extraction of water from such well for such period as may be specified in such order, if in its opinion, it is necessary to do so in the interest of protection of public sources of drinking water: and

(b) such other conditions and restrictions, as may be prescribed.

8. **Prohibition of extraction of water from an existing well for certain period.-** If, on the advice of the Technical Officer, the appropriate authority is satisfied that any existing well in area of over exploited watershed is adversely affecting any public source of drinking water, it may, notwithstanding anything contained in any law for the time being in force and having regard to the quantum and pattern of

rainfall and other relevant factor and after giving its owner a reasonable opportunity of being heard, by an order, prohibit the extraction of water from such well during the five months period from the First February to thirty-first July every year.

9. **Closing down of existing well.-** Notwithstanding anything contained in this Act or any other law for the time being in force, if on the advice of the Technical Officer, the appropriate authority is satisfied that any existing well in the area of an over-exploited watershed is adversely affecting any public source of drinking water and such source cannot be adequately protected by action under section 8, it may, after giving the owner of the well a reasonable opportunity of being heard, require him by order to stop the extraction of water from, and close, seal off, such well forthwith either temporarily or permanently having regard to the extent to which it is adversely affecting the public source of drinking water.

10. **Power of entry upon any land for obtaining information.-** Whenever it is necessary to make an inquiry or examination in connection with the protection of a public source of drinking water or with the maintenance of a public water supply system, the appropriate authority or any officer duly authorised by it in this behalf may, after giving prior notice.-

(a) enter upon such land as he or it may think necessary for the said purpose;

(b) undertake surveys or take levels thereon;

(c) conduct pumping tests and geophysical surveys;

(d) conduct well logging on the bore;

(e) install and maintain water level recorder and water guages on the well; and

(f) do all such other things as may be necessary for the prosecution of such inquiry and examination.

11. **Power to stop contravention of the provisions of section 3, 5, 7, 8 or 9.-** (1) Wherever it appears to the appropriate authority that any well has been sunk or is being sunk in contravention of the provisions of section 3 or 7 or water has been extracted or is being extracted in contravention of section 8 or 9 the appropriate authority or an officer duly authorised by it in this behalf may enter upon that land, remove obstruction, if any, close the pumping of the water, disconnect power supply, seize any material or equipment used in connection with such extraction of water and take any such action, as may be required to stop such contravention, and may, by order, require the owner or the person in possession of the well to close or seal off the well at his expenses and in such manner as the appropriate authority may specify in such order and such owner or person shall comply with such order.

(2) Where such owner or person fails to comply with any order made under sub-section (1), the appropriate authority may, after giving such owner or persons due notice in that behalf, enter upon the land and close or seal off the well and the cost incurred thereof shall be recoverable from such owner or person as an arrears of land revenue.

12. **Payment of compensation.-** (1) Where an order of closing down or sealing off the well is made under section 9, the owner of such well may apply to the appropriate authority in the prescribed manner for payment of compensation.

(2) The Appropriate Authority may, on making such inquiry and requiring the owner to produce such evidence as it may deem necessary, make an order for payment of compensation to the owner at the market price, determined in accordance with the provisions of the Land Acquisition Act, 1894.

13. **Bar to claim compensation.-** Subject to the provisions of section 12, no person shall be entitled to claim any damages or compensation from the Government for any loss sustained by him as a result of any order passed under the clause(a) of sub-section(4) of section 3 or under sections 8,9,or 11 or by virtue of any action taken under this Act.

## CHAPTER - III

## Miscellaneous

14. **Appeals.-** (1) Any person aggrieved by any order, made by the Appropriate Authority under any of the provisions of this Act may, within a period of thirty days from the date of receipt of the order by him, appeal to the Deputy Commissioner, if the order is made by any officer other than the Deputy Commissioner and to such authority, as may be prescribed, if the order is made by the Deputy Commissioner. On receipt of such appeal, the Appellate Authority shall, after giving a reasonable opportunity to the appellant of being heard, pass such order as it may think fit. Every order made by the Appellate Authority in such appeal shall be final and shall not be called in question in any court.

(2) Before giving any decision in such appeal the appellate authority shall obtain the views of such officer of the Department of Mines and Geology as may be prescribed, and shall take such views into consideration.

(3) Save as otherwise provided in sub-section (1), every order made and every direction issued under this Act shall be final and shall not be called in question in any court.

**15. Protection of action taken in good faith.**-(1) No suit, prosecution or other legal proceeding shall lie against any public servant or person appointed or authorised under this Act in respect of anything done or intended to be done in good faith under this Act or in pursuance of any order made or directions issued under this Act.

(2) No suit, prosecution or other legal proceeding shall lie against the Government or any Officer of the Government for any damage caused or likely be caused by anything done or intended to be done in good faith under this Act or in pursuance of any order made or direction issued under this Act.

**16. Penalty.**- (1) Whoever contravenes any of the provisions of this Act or obstructs any person in the discharge of his duties under this Act or contravenes any order or violates any rule made under this Act shall, on conviction, be punished with imprisonment which shall not be less than one month but which may extend to six months or with fine which shall not be less than one thousand rupees but may extend to five thousand rupees or with both.

(2) Whoever, without proper authority, damages, alters or obstructs any part of the public water supply system shall on conviction, be punished with imprisonment which shall not be less than two months but which may extend to one year or with fine which shall not be less than two thousand rupees but may extend to five thousand rupees or with both.

(3) In the case of a continuing offence, the offender shall be punished with an additional fine which may extend to rupees hundred for every day during which offence continues after the conviction.

**17. Offences by companies.**- (1) Where an offence under this Act has been committed by a company, every person who at the time the offence was committed, was in charge of and was responsible to the company for the conduct of the business of the company, as well as the company shall be deemed to be guilty of the offence and shall be liable to be proceeded against and punished accordingly:

Provided that nothing contained in this sub-section shall render any such person liable to any punishment provided in this Act if he proves that the offence was committed without his knowledge or that he exercised all due diligence to prevent the commission of such offence.

(2) Notwithstanding anything contained in sub-section(1) where an offence under this Act, has been committed by a company and it is proved that the offence has been committed with the consent or connivance of, or is attributable to any neglect on the part of, any director, manager, secretary or other officer of the company such director, manager, secretary or other officer shall also be deemed to be guilty of that offence and shall be liable to be proceeded against and punished accordingly.

**Explanation.**- For the purposes of this section.-

(a) "company" means a body corporate, and includes a firm or other association of individuals; and

(b) "director" in relation to a firm means partner in the firm.

**18. Overriding effect of Act.**-The provisions of the Act and the order issued or made thereunder shall have effect notwithstanding anything to the contrary contained in any other law for the time being in force.

**19. Method of service of notices etc.** (1) Subject to such rules as may be prescribed, service of any notice or other document under this Act or any Order made thereunder, on any person to whom it is by name addressed shall be effected.-

(i) by giving or tendering the said notice or document or a copy of the said order to such person; or

(ii) if such person is not found, by leaving such notice or document or copy of the order at his last known place of residence or business or by giving or tendering the same to some adult member or servant of his family; or

(iii) by sending such notice or document or the copy of the order to such person by registered post; or

(iv) by affixing such notice or document or copy of the order on some conspicuous part of house, if any in which such person is known to have last resided or carried on business or personally worked for gain.

(2) No such notice shall be deemed to be void on account of any defect of form.

**20. Power to make rules.-** (1) The Government may by notification and after previous publication, make rules to carry out the purposes of this Act.

(2) In particular and without prejudice to the generality of the foregoing power, such rules may provide, for,-

(a) the form of application under sub-section (2) of section 3 and the fees to be paid in respect of such application;

(b) the conditions and restrictions under clause (b) of sub-section (4) of section 3;

(c) the form of application under sub-section(2) of section 7 and the fees to be paid for such application;

(d) the restrictions and conditions under clause (b) of sub-section (4) of section 7;

(e) the manner of applying for payment of compensation under section 12 and payment of fees for applying for payment of compensation;

(f) any other matter for which rules have to be made or are necessary.

(3) Every rule made under this Act shall be laid, as soon as may be, after it is made, before each House of the State Legislature while it is in session, for a total period of thirty days, which may be comprised in one session or in two or more successive sessions, and if before the expiry of the session in which it is so laid or the session or sessions immediately following, both Houses agree in making any modification in the rule or both Houses agree that the rule should not be made the rule shall thereafter have effect only in such modified form or be of no effect, as the case may be; so, however, that any modification or annulment shall be without prejudice to the validity of anything previously done under that rule.

**21. Power to remove difficulties.-** If any difficulty arises in giving effect to the provisions of this Act, the Government may, as occasion arises, by order, do anything, which appears to it to be necessary or expedient to remove the difficulty:

Provided that no such order shall made after the expiry of the period of two years from the date of commencement of this Act.

The above translation of the ಕರ್ನಾಟಕ ಅಂತರಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ 1999 (2003 ರ ಕರ್ನಾಟಕ ಅಧಿನಿಯಮ 44) be published in the Official Gazette under clause (3) of Article 348 of the constitution of India.

**T.N. Chaturvedi**
**Governor of Karnataka**

By Order and in the name of the Governor of Karnataka

**M.R. Hegde**
Secretary to Government,
Department of Parliamentary Affairs and Legislation

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.